ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ತಾ. ೩೦—೧೨—೧೯೩೮.

ವಾರ್ಷಿಕ ಚಂದಾ ರೂ. ೩-೮-೦
ಸಂಪುಟ ೧೮] [ಸಂಚಿಕೆ ೩೦

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 9. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

Advances on GOLD & OTHER VALUABLE SECURITIES are granted at all our Branches.

DEPOSITS for varying periods are accepted at the following rates:—

3 months	2½% p. a.
6 & 9 months	3 % p. a
12 & 24 months	3½% p. a.
SHORT TERM	2 % p a.
SAVINGS BANK ACCOUNT	2½% p. a.

BANKING BUSINESS OF EVERY DESCRIPTION UNDERTAKEN.

52-3

ಜೈವನ ಪ್ರಾಕ್ಸ್

ಜೀವನ ಪ್ರಾಕ್ಸವೆಂಬುದು ವೃದ್ಧ ಮುಪ್ಪಿನಿಗೆ ಅಶ್ವಸೇ ದೇಹತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನ

ಇದು ಅತ್ಯಂತ ಶಕ್ತಿವರ್ಧಕ ಹಸಿವನ್ನು ತೀಪ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕ್ಷಯ, ಕೆಮ್ಮು, ಶೀತ ಬಾಧೆ, ಉಬ್ಬಸ, ಪಾಸ ಶ್ವಾಸ, ಪೃಷ್ಠೋಗ ಇವುಗಳ ಮೇಲೆ ದಿವ್ಯವಾಸದ್ದು. ಪೌಂಡು 1ರ ರೂ. 2—8—0. ಅರ್ಧಕ್ಕೆ ರೂ. 1—5—0.

ಕಸ್ತೂರಿ ಮಿಶ್ರಣ ದಶಮೂಲ

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ತೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಅರುಚಿ, ಅಗ್ನಿ ಮಾಂದ್ಯವುಂತಾದವುಗಳನ್ನು ಹೋಗಲಾಡಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಟಿ 1ರ ರೂ. 1—8—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (3) ಎ. ಎಸ್. ಮಾಚಯ್ಯ, ಸುಂಟಿಕೊಪ್ಪ. (4) ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (5) ಎ. ಎನ್. ಹುಚ್ಚಯ್ಯ, ಗೋಣಿಕೊಪ್ಪಲು.

[19]

ಡಾ. ಕೆ. ಟಿ. ಸಂಬಿಯ್ಯಾರ್,
ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳಿಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧತೆದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂಬು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂ ಕುಷವಾಗಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

6

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊಯೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ ಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ನೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural &
Industrial Bank Ltd

52-30

"ZANDU" ಝಂಡೂರವರ	ಝಂಡೂರವರ
ಕೇಸರಿ ಚೀವನ್ ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.	**ದ್ರಾಕ್ಷಾಸವ** ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.
ಝಂಡೂ ಅಯೋಡೈಸ್ಡ್ **ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.	

ಝಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಜೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್, ಮತ್ತು ಆಯುರ್ವೇದ ವಿದ್ವಾನ್

(52-20)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮುಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೬,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೦,೨೩೬—೧೩—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೫೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೬— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯು ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗ್ತುವುದು.

೧೯೧೭ ———— ೩,೨೫,೧೩೩ ರೂಗಳು.
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯು ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್ಸಿ., ಎಲ್ಎಲ್.ಬಿ.
ಅಭಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12-14

ವಿವಿಧ ವಿಚಾರ.

ಕಾರ್ಖಾನೆಗಳಲ್ಲಿ ತಯಾರಾಪ ಮನೆಗಳು.

ಈ ತನಕ ಕಾರ್ಖಾನೆಗಳಲ್ಲಿ ಮೋಟಾರು, ವಿಮಾನ ವೇ ಮೊದಲಾದ ಯಂತ್ರಗಳನ್ನು ತಯಾರಿಸುತ್ತಿದ್ದರು. ಇನ್ನು ಮುಂದೆ ಮನೆ ಮಠಗಳನ್ನೂ ತಯಾರಿಸಿ ಬಿಕರಿಗಿಡುವ ಯೋಜನೆಯು ಅಮೇರಿಕಾ ದೇಶದಲ್ಲಿ ನಡೆಯುತ್ತಿದೆ. ಒಂದೆರಡು ಮನೆಗಳನ್ನು ತಯಾರಿಸಿ ಈ ಮೊದಲೇ ನೂರಲ್ಪಟ್ಟವೆ. ಆದರೆ, ಇನ್ನು ಮುಂದೆ ಅವುಗಳನ್ನು ತುಂಬಾ ತಯಾರಿಸಿ ಮಾರಾಟಕ್ಕಿಡಲಿರುವರು. ಹೀಗೆ ಮಾಡಿದರೆ ಸಾಮಾನ್ಯ ಒಂದು ಮನೆಯನ್ನು ಕಟ್ಟಿಸಲು ಈಗ ತಗಲುವ ಖರ್ಚಿನ ಅರ್ಧ, ಅರ್ಧಕ್ಕಿಂತಲೂ ಕಡಿಮೆ ದರದಲ್ಲಿ ಅವುಗಳನ್ನು ಮಾರಲು ಸಾಧ್ಯವಾಗುವದಂತೆ.

—೦೦—

ಲೋಹದ ಫಿಲ್ಮುಗಳು.

ಹತ್ತು ವರ್ಷಗಳ ಪ್ರಯತ್ನದಿಂದಾಗಿ ನ್ಯೂಯಾರ್ಕಿನ ಡಾ. ರೊಬರ್ಟ್ ಕಾರ್ಟರರೆಂಬವರು ಲೋಹದ ಫಿಲ್ಮುಗಳನ್ನು ತಯಾರಿಸಿರುವರು. ಅವುಗಳನ್ನು ಈಗಿನ ಫಿಲ್ಮುಗಳಿಗಿಂತಲೂ ಕಡಿಮೆ ಕ್ರಯಕ್ಕೆ ಮಾರಲು ಸಾಧ್ಯವಿದೆಯಂತೆ. ಮಾತ್ರವಲ್ಲ, ಅವುಗಳ ಪ್ರಯೋಜನವೂ ತುಂಬಾ ಇದೆ. ಅದರ ಎರಡು ಬದಿಗಳಲ್ಲಿ ಚಿತ್ರವನ್ನು ತೆಗೆಯಲು ಸಾಧ್ಯವಿದೆಯಲ್ಲದೆ, ಇದು ಹಾಳಾಗುವುದೂ, ಮುರುಡಿಕೊಳ್ಳುವುದೂ ಇಲ್ಲವಂತೆ.

ಈಗಿನ ಫಿಲ್ಮುಗಳಲ್ಲಿದ್ದ ಚಿತ್ರಗಳನ್ನು ಅವುಗಳ ಹಿಂದಿನಿಂದ ದೀಪವನ್ನಿಟ್ಟು ತೋರಿಸುವರಷ್ಟೆ! ಆದರೆ ಈ ಲೋಹದ ಫಿಲ್ಮಿನಲ್ಲಿದ್ದುಗಳನ್ನು ತೋರಿಸುವ ಕ್ರಮವೇ ಬೇರೆ. ಪಾರದರ್ಶಕವಲ್ಲದ ಅವುಗಳ ಮುಂದುಗಡೆಯಲ್ಲಿ ದೀಪವನ್ನಿಟ್ಟು ಅವುಗಳ ಪ್ರತಿಬಿಂಬವು ಫರದೆಯ ಮೇಲೆ ಬೀಳುವಂತೆ ಮಾಡಲಾಗುವುದು.

—೦೦—

ತುಂಡಾದ ಎಲುಬುಗಳನ್ನು ಜೋಡಿಸುವ ವಿಚಿತ್ರ ವೈದ್ಯ.

ಉತ್ತರ ಕನ್ನಡದ ಅಂಕೋಲೆ ತಾಲೂಕಿನಲ್ಲಿ ಟೋಡೂರು ಎಂಬುದೊಂದು ಹಳ್ಳಿಯಿದೆ. ಇಲ್ಲಿ ಹಳೆಯ ಗೌಡನೆಂಬೊಬ್ಬ ಸಾಧುವು ಇರುವನು. ಈತನು ಕುಂಭಿ ಮನೆತನವನವನು. ಅನೇಕ ವರ್ಷಗಳ ಹಿಂದೆಈತನ ಪೂರ್ವಜರಲ್ಲೊಬ್ಬನು ಭೇಟೆಗೆ ಹೋದಾಗ ಒಂದು ಜಿಂಕೆಯನ್ನು ಕೊಂದಿದ್ದನು. ಬಳಿಕ ಅವನ್ನು ಅನೇಕ ತುಂಡುಗಳನ್ನಾಗಿ ಮಾಡಿ ತನ್ನೊಡನೆ ಬಂದವರಿಗೆ ಒಂದೊಂದು ಪಾಲನ್ನು ಅತನು ಕೊಟ್ಟನು. ತನ್ನ ಪಾಲನ್ನು ಅಲ್ಲಿಯೇ ಬಳಿಯಲ್ಲಿದ್ದ ಮರದ ಎಲೆಗಳಿಂದ್ಹಾಬ್ಬದಸಿ ಮನೆಗೆ ಒಯ್ದನು. ಮನೆಗೆ ಹೋಗಿ ನೋಡಲು ಅವರಲ್ಲಿದ್ದ ಎಲ್ಲಾ ತುಂಡುಗಳು ಒಂದೇ ಮುದ್ದೆಯಾಗಿಸ್ದದನ್ನು ಕಂಡು ಅವನಿಗೆ ಪರಮಾಶ್ಚರ್ಯವಾಯಿತು! ಕಾಡಿಗೆ ಹೋಗಿ ಅದೇ ಮರದ ಎಲೆಗಳನ್ನು ಪುನಹ ತಂದು ಪರೀಕ್ಷಿಸಿ ನೋಡಿದಾತನು. ಅವುಗಳ ಸ್ಪರ್ಶವಾದೊಡನೆ ಮಾಂಸವ ಎಷ್ಟು ತುಂಡುಗಳಿದ್ದರೂ ಮುದ್ದೆ.

ಈ ಗುಟ್ಟು ತಂದೆಯಿಂದ ಮಗನಿಗೆ, ಅತನಿಂದ ಆತನ ಮಗನಿಗೆ ಹೇಳಲ್ಪಟ್ಟು, ಈಗಲೂ ಆ ಕುಟುಂಬವನವ ನಾವ ಆ ಸಾಧುವಿಗೆ ತಿಳಿದಿರುವುದು. ಪರರಿಗೆ ಅವನ್ನು ಹೇಳಿದರೆ, ಅವರಿಂದ ತನಗೆ ಹಾನಿಯುಂಟಾಗಬಹುದೆಂದಾತನು ಬೆದರುತ್ತಿರುವನು.

ತುಂಡಾದ ಎಲುಬುಗಳನ್ನು ಸರಿಪಡಿಸಲು ಆ ಎಲೆಗಳನ್ನಾತನು ಉಪಯೋಗಿಸುತ್ತಿರುವನು. ಎಂಥಾ ಕಠಿನ ತರದ 'ಕೇಸು'ಗಳೂ ಅವುಗಳ ಉಪಯೋಗದಿಂದ ಗುಣವಾಗುತ್ತಿರುವವು. ಆತನ ಹೆಸರಿಂದು ಪ್ರತಿಯೋರ್ವ ಹಳ್ಳಿಗನಿಗೂ ತಿಳಿದಿರುವುದು. ಕೊಡಗೂ ಈ ವಿಚಾರದಲ್ಲಿ ಹಿಂದಲ್ಲವಷ್ಟೆ!

—೦೦—

ನಶ್ಯದ ಮಹಿಮೆ.

ಅಮೇರಿಕವ ಸಂಯುಕ್ತ ಸಂಸ್ಥಾನಗಳ ದಕ್ಷಿಣ ಜಿಲ್ಲೆಗಳಲ್ಲಿ ಡಾಕ್ಟರುಗಳಾದ ಮೆಡ್ಜ್ ಮತ್ತು ಲ್ಯಾಕಿ ಎಂಬವರು ನಶ್ಯ ಹಾಕುವುದರಿಂದ ಯಾವ ವಿಧವಾದ ಹೊಟ್ಟೆ ನೋವಿದ್ದರೂ ಗುಣವಾಗುವುದಾಗಿ ತಿಳಿಸಿದ್ದಾರೆ. ಶೇಕಡ 80ನಷ್ಟು ಮಂದಿಗೆ ಗುಣವಾಗಿರುವುದಾಗಿ ಇವರು ತಿಳಿಸಿದ್ದಾರೆ. ದಿನಕ್ಕೆ ನಾಲ್ಕು ಸಲ ನಶ್ಯ ಹಾಕಬೇಕಂತೆ. ಇದರಿಂದ ಜೀರ್ಣಾಂಗಗಳು ಸಡಿಲವಾಗಿ ಲವಲವಿಕೆಯಿಂದ ಕೆಲಸ ಮಾಡುವುದೆಂದೂ, ಆಗ ತಿಂದದ್ದೆಲ್ಲಾ ಜೀರ್ಣವಾಗುವುದೆಂದೂ, ಯಾವಾಗ ಜೀರ್ಣವಾಯಿತೋ ಆಗ ಹೊಟ್ಟೆ ನೋವೆಲ್ಲಿ ಬಂತು? ಎಂದೂ ಈ ಪುಣ್ಯಾತ್ಮರು ಕೇಳಿದ್ದಾರೆ.

—೦೦—

ಸುಧಾರಿತ ಕ್ಷೌರದ ಕತ್ತಿ!

ಎಲ್ಲಾ ವಿಚಾರಗಳಲ್ಲೂ ಸುಧಾರಣೆಗಳಾಗುತ್ತಿರುವಾಗ ಕ್ಷೌರದ ಬ್ಲೇಡಿನಲ್ಲೂ ಸುಧಾರಣೆ ಯಾಕಾಗಬಾರದು? ಆದ್ದರಿಂದ ಈ ಸುಧಾರಣೆಯಾಗಿದೆ. ಕೇಳಿ! ಇನ್ನು ಮೇಲೆ ನೀವು ಸಾಬೂನನ್ನು ಬ್ರಷ್‌ನಿಂದ ಬಳಿದು ಕೊಳ್ಳುವ ಅಗತ್ಯವೇ ಇಲ್ಲ. ಏಕೆಂದರೆ ಸಾಬೂನಿನ ನೊರೆಯ ನಳಿಗೆಯೆನ್ನೂ ಸಹ ರೇಜರಿನ ಹಿಡಿಯಲ್ಲಿ ಸೇರಿಸಲಾಗಿದೆ. ಹಿಡಿಯನ್ನು ಬಲವಾಗಿ ಹಿಡಿದುಕೊಂಡು ಕೆನ್ನೆಯ ಮೇಲೆ ಎಳೆದರೆ ಸಾಬೂನಿನ ನೊರೆಯು ನಳಿಗೆಯನ್ನು ಅಮುಕುವುದರಿಂದ ಬ್ಲೇಡಿನ ತುದಿಯಲ್ಲಿರುವ ರಂಧ್ರಗಳಲ್ಲಿ ಬಂದು ಸೇರುತ್ತವೆ. ನಂತರ ಆ ನಳಿಗೆಯೇ ಹಿಡಿಯಾಗಿಯೂ ಪರಿಣಮಿಸುವುದರಿಂದ ಸುಖವಾಗಿ ವಪನ ಮಾಡಿಕೊಳ್ಳಬಹುದು ಎಂದು ಹೇಳಲಾಗಿದೆ.

—೦೦—

ಚಲಿಸುವ ಪೋಸ್ಟಾಫೀಸ್.

ಇನ್ನು ಮುಂದೆ ನಾವು ಪೋಸ್ಟಾಫೀಸಿಗೆ ಹೋಗಬೇಕಾದ್ದೂ ಇಲ್ಲ. ಅಂಚೆ ಜವಾನರು ನಮ್ಮ ಮನೆ ಬಾಗಲಿಗೆ ಅಲೆಯಬೇಕಾದ್ದೂ ಇಲ್ಲ. ಏಕೆಂದರೆ ಪೋಸ್ಟಾಫೀಸುಗಳು ಓಡಾಡಬಲ್ಲವು! ಅಂಥ ಮಾತ್ರಕ್ಕೆ ಅವಕ್ಕೆ ನಮ್ಮಂತೆ ಜೀವವಿದೆಯೇ ಎಂದು ಕೇಳಬೇಡಿ. ಅವುಗಳನ್ನು ದೊಡ್ಡ ದೊಡ್ಡ ಮೋಟಾರುಗಳ ಮೇಲೆ ಸ್ಥಾಪಿಸಲಾಗುವು. ಇದು ಯಾವಾಗಲೂ ನಾಡಿನಲ್ಲೇ ಸಂಚರಿಸುತ್ತಿದ್ದು ಅಗತ್ಯ ಕಂಡು ಬಂದ ಕಡೆ ಮಾತ್ರ ಒಂದು ದಿನದ ಮಟ್ಟಿಗೆ ನಿಲ್ಲುತ್ತದೆ. ಈಗ ಈ ರೀತಿ ಅಂಚೆ ಕಚೇರಿಯೊಂದು 13 ಸಾವಿರ ಮೈಲಿಗಳ ಸಂಚಾರವನ್ನು ಮುಗಿಸಿಕೊಂಡು 'ರಾಯಲ್ ಜೋ'ಗಾಗಿ ರಿಚ್ಮಂಡ್ ಎಂಬಲ್ಲಿದೆ. ಇದೇ ಅನೇಕ ಗ್ರಾಮ ವಸ್ತು ಪ್ರದರ್ಶನಗಳಲ್ಲಿಡಲ್ಪಟ್ಟಿತು. 32 ವರ್ಷಗಳ ಕಾಲ ಅಂಚೆ ಕಚೇರಿಗಳಲ್ಲಿ ಕೆಲಸ ಮಾಡಿ ಅನುಭವ ಪಡೆದ ಶ್ರೀ. ಎ. ಎಫ್. ಬೇನಿಯವರು ಈಗ ಇವರ ಆಡಳಿತ ನೋಡಿಕೊಳ್ಳುತ್ತಿರುವರು. ಮನಿಯೊರ್ಡರು ಮಾಡಬೇಕಾದರೆ, ರಿಜಿಸ್ಟರು ಮಾಡಬೇಕಾದರೆ ಟೆಲಿಗ್ರಾಂ, ಟೆಲಿಫೋನ್ ಸೌಕರ್ಯಗಳು ಬೇಕಾದರೆ ಎಲ್ಲ ಇಲಿದೊರೆಯುವವಂತೆ! ಓಡಾಡುವ ಮನೆಗಳೇ ಪ್ರಚಾರದಲ್ಲಿರುವಾಗ ಇಂಥಾ ಕಚೇರಿಗಳನ್ನು ಕೇಳಿದರೆ ಆಶ್ಚರ್ಯವೇನೂ ಕಂಡು ಬಾರದು. ಮೊನ್ನೆ ತಾನೇ ಸಂಯುಕ್ತ ಪ್ರಾಂತ್ಯದ ಸರ್ಕಾರದವರು ಓಡಾಡುವ ಆಸ್ಪತ್ರೆಗೆ ಅನುಮತಿ ಇತ್ತಿದ್ದಾರೆ. ಅಮೇರಿಕಯ ವ್ಯವಸಾಯ-ಶಾಲೆಯೊಂದನ್ನು ಒಂದು ದೊಡ್ಡ ಲಾರಿಯ ಮೇಲೆ ನಿರ್ಮಿಸಿದ್ದಾರೆ. ಎಷ್ಟೇ ಆಗಲಿ, ಆಧುನಿಕ ಯುಗದ ಮಹಿಮೆ!

—೦೦—

ಪಾತ್ರೆಗಳನ್ನು ತೊಳೆಯುವ ಅಗತ್ಯವಿಲ್ಲ.

ಒಬ್ಬನು ಊಟ ಮಾಡಿ ಸ್ನಾತ್ರಗಳನ್ನು ತೊಳೆಯುವುದೆಂದರೆ ಅದೊಂದು ರಗಳೆಯ ಕೆಲಸ. ಆ ಕೆಲಸವು ಇಲ್ಲದಂತೆ ಮಾಡುವುದಕ್ಕಾಗಿ ನ್ಯೂಯೊರ್ಕಿನ ಒಬ್ಬ ವ್ಯಾಪಾರಿಯು ಕಲ್ಲು ಸಕ್ಕರೆಯ ಪಾತ್ರೆಗಳನ್ನು ತಯಾರಿಸಿರುವನು. ಅವುಗಳಲ್ಲಿದ್ದ ಆಹಾರಾದಿಗಳನ್ನು ತಿಂದ ಬಳಿಕ ಆ ಪಾತ್ರೆಗಳನ್ನೂ ತಿಂದು ಮುಗಿಸುವುದು. ಮತ್ತೆ ಊಟಕ್ಕೆ ಕುಳಿತ್ತಿದ್ದ ಸ್ಥಳವನ್ನು ಮಾತ್ರ ಒಮ್ಮೆ ಉಜ್ಜಿಬಿಟ್ಟರಾಯಿತು. ನೋಡಿ, ಸೋಜಿಗವನ್ನು! ದಿನಕ್ಕೆ ಮೂರೊತ್ತುಂಬುವನು ಮೂರು ಪಾತ್ರೆಗಳನ್ನು ತಿಂದರೆ ತಿಂಗಳಿಗೆಷ್ಟು? ವರ್ಷಕ್ಕೆಷ್ಟು? ಅವನ ಕಾಲಾಂತ್ಯದವರೆಗೆಷ್ಟು? ಪಾತ್ರೆಗಳ ಕ್ರಯವೆಷ್ಟು? ನನ್ಮೂರಿಗೆ ಅಂಥಾ ವ್ಯಾಪಾರಸ್ಥರೇ ಬೇಡಪ್ಪ!

—೦೦—

ಜಪಾನೀ ಬುದ್ಧಿವಂತಿಕೆ.

ನಮ್ಮ ಕೆಲವು ವ್ಯಾಪಾರಿಗಳಿಗೆ ತೂಕದಲ್ಲಿ, ಕ್ರಯದಲ್ಲಿ, ವಸ್ತುವಿನಲ್ಲಿ ಮೋಸ ಮಾಡಲು ಮಾತ್ರ ಗೊತ್ತು. ಅವರೆ ಜಪಾನಿಯರು ಅದೆಲ್ಲವನ್ನೂ ಬಿಟ್ಟು, ಮೂಲದಲ್ಲೇ ಮೋಸ ಮಾಡಲು ತೊಡಗುತ್ತಾರೆ. ಅವರ ಸಾಮಾನುಗಳು ಎಲ್ಲೆಲ್ಲಿ ತಯಾರಾಗುತ್ತವೋ ಆ ಸ್ಥಳಗಳ ಹೆಸರುಗಳನ್ನು ಜಗತ್ತಿನ ವ್ಯಾಪಾರ ಕ್ಷೇತ್ರಕ್ಕೆ ಅನುಕೂಲವಾಗಿ ಬದಲಾಯಿಸಿ ಎಲ್ಲರ ಬಾಯಿಗೂ ಮಣ್ಣು ಹಾಕುವ ಚಾತುರ್ಯ ಅವರಲ್ಲಿದೆ. ಮೆಂಚಿಸ್ಟರ್ ಬಟ್ಟೆಗೆ ಹೆಚ್ಚು ಗಿರಾಕಿ ಇದೆಯೆಂದು ತಿಳಿದೊಡನೆ ಅವರ ಬಟ್ಟೆ ಗಿರಣಿಗಳಿರುವ ಪ್ರದೇಶಕ್ಕೆ 'ಮೆಂಚಿಸ್ಟರ' ಎಂಬ ನಾಮಕರಣ ಮಾಡಿ 'ಮೆಂಚಿಸ್ಟರಿನಲ್ಲಿ ತಯಾರಾದುದು' ಎಂದು ಬರೆದು ವಸ್ತುಗಳನ್ನು ವಿಕ್ರಯಕ್ಕೆ ತರುವರು. ಅದೇ ರೀತಿ ಅಲ್ಲಿ ಸ್ವೀಡನ್, ಮೆಕ್ಲೆಸ್ ಫೀಲ್ಡ್, ಬವೇರಿಯಾ, ಲಿವರ್ ಪೂಲ್ ಎಂಬ ಪ್ರದೇಶಗಳು ಬೇಕು ಬೇಕಾದ ವಸ್ತುಗಳ ತಯಾರಿಗಾಗಿ ನಾಮಕರಣ ಮಾಡಲ್ಪಟ್ಟವುಗಳು! ನಮ್ಮ ಕೆಲವು ವ್ಯಾಪಾರಿಗಳಾದರೂ ಜಪಾನಿ ಬಟ್ಟೆಗಳನ್ನೂ, ವಸ್ತುಗಳನ್ನೂ ಜರ್ಮನಿ, ಇಂಗ್ಲೆಂಡು, ಅಮೇರಿಕೆಯವೆಂದು ಅಧಿಕ ಬೆಲೆಗೆ ಮಾರುವುದರಲ್ಲಿ ತಪ್ಪೇನು?

—೦೦—

ಸೀಸದಿಂದ ಚಿನ್ನ!

ನಮ್ಮ ಹಿರಿಯರ ಆ ಪುರಾತನದ ಅಜ್ಞಾನತೆ ಸತ್ಯವಾಗಿದೆ. ಸಾಧುಗಳು ಬೇಕಷ್ಟೇ ಬಂಗಾರ ತಯಾರಿಸಿ, ಜೋಳಿಗೆ ತುಂಬಿಸಿಕೊಂಡು ಸೇದುವ ವಿಚಾರ 'ನಿಜ' ವೆಂದು ಕೆಲವರಿಗೆ ಹೊಳೆದಿದೆ. ಪೋಲೆಂಡಿನ ಲೋಡ್ಜ್ ಎಂಬಲ್ಲಿನ ತರುಣನೊಬ್ಬನು ಇದೀಗ ಸೀಸದಿಂದ ಚಿನ್ನ ತಯಾರಿಸುವುದನ್ನು ಕಂಡು ಹಿಡಿದಿದ್ದಾನೆ. ತಾನು ಮಾಡಿದ ಬಂಗಾರದ ಮೂವರಿ ತುಂಡನ್ನು ಶೋಧಕ ಸಂಸ್ಥೆಗೆ ಕಳುಹಿಸಿದ್ದಾನೆ. ಆ ಸಂಘದವರು ಇದೀಗ ಈ ಕೆಲಸವನ್ನು ಸಂಪೂರ್ಣವಾಗಿ ಮುಂದುವರಿಸಲು ಇಬ್ಬರು ಶೋಧಕರು, ಒಬ್ಬ ಇಂಜನೀಯರ, ಹಾಗೂ ಶೋಧಕ ಸಂಸ್ಥೆಯ ಸದಸ್ಯರೊಬ್ಬರಿಂದೊಡಗೂಡಿದ ಕಮಿಟಿಯೊಂದನ್ನು ಏರ್ಪಡಿಸಿದ್ದಾರೆ. ಆದರೆ ಶೋಧಕನ ಹೆಸರನ್ನು ಮಾತ್ರ ಅವರು ಪ್ರಕಟಿಸಲಿಲ್ಲ. ಕಾರಣ ಆತ ಜಪಾನೀಯನೆಂದು ಜಪಾನಿಗೂ, ನಾಜಿಯೆಂದು ಜರ್ಮನಿ ಇಟಲಿಗಳೂ, ಬ್ರಿಟಿಷ್ ಎಂದು ಬ್ರಿಟನೂ ಹೇಳಿಬಿಡಬಹುದೆಂಬ ಭಯ! ಅಂತೂ ಯಾವ ದೇಶವನ್ನೇ ಆಗಲಿ, ಆತನ ಸಹಸಕ್ಕೆ ಮೆಚ್ಚಬೇಕಷ್ಟೆ? ಸೀಸದಿಂದ ಚಿನ್ನವಾದರೆ ವಿಭರಣಗಳು ಯಥೇಚ್ಛವಾಗಬಹುದು! ಸ್ತ್ರೀಯರ ಸಂತೋಷವು ಮಿತಿಮೀರುವುದು!! ದುಂದುಗಾರಿಕೆಗೆ ಅಂತ್ಯವೇ ಇಲ್ಲದಾಗುವುದು!!! ಬೇಡಪ್ಪ ಬೇಡ, ನಮಗೆ ಅಂಥವರ ಸಹವಾಸ.

—೦೦—

ದುಂದುಗಾರಿಕೆಯನ್ನು ತಪ್ಪಿಸಲು ಸ್ತ್ರೀಯರು ಮುಂದೆ ಬರಬೇಕು-ಲೇ:-ಬಿ. ಯಂ. ಅಪ್ಪಯ್ಯ.

ಮಡಿಕೇರಿಯನ್ನು ನೋಡದ ಮತ್ತು ಕೇಳದ ಕೊಡಗರ್ಯಾರೂ ಇಲ್ಲ. ಹಿಂದಿನ ಮಡಿಕೇರಿಯನ್ನು ಇಂದಿನ ಮಡಿಕೇರಿಗೆ ಸರಿಹೋಲಿಸಿ ನೋಡಿದಲ್ಲಿ ಇನ್ನು ಕೊಂಚ ವರ್ಷಗಳಲ್ಲೇ ಪಟ್ಟಣವು ಪದ್ಮನ ಸಾನವೇನಾಗಬಹುದೆಂದು ಊಹಿಸಲು ಮನಸ್ಸು ತವಕಪಡುತ್ತಿದೆ.

ಮಡಿಕೇರಿಯು ಕೊಡಗಿನ ಮುಖ್ಯ ಪಟ್ಟಣವಾಗಿ ಈ ದೇಶ ಮತ್ತು ಪರದೇಶದ ವರು ಇದೊಂದು ಸಾಮಾನ್ಯ ಊರು ಎಂದು ಭಾವಿಸಿದ್ದರೂ, ಪಟ್ಟಣದಲ್ಲಿ ವಾಸಿಸುವ ಜನರ ನಿಯಮಗಳು ವಿಪರೀತಾವಸ್ಥೆಗೆ ಏರಿವೆ. ಇಲ್ಲಿಯ ಜನರ ಜೀವನದ ರೀತಿಯೂ, ಆವರ ಪೋಷಾಕೂ ನಡೆನುಡಿಗಳು ಯಾರೋ ಒಬ್ಬ ಆಂಗ್ಲೋ ಮಹನೀಯರು ಹೇಳಿದ ಹಾಗೆ ಯೂರೋಫ್ ಖಂಡದಲ್ಲಿರುವ ಸ್ಕಾಟ್‌ಲೆಂಡ್ ದೇಶವನ್ನು ಮೀರಿಸಿದೆ. ಇಂಗ್ಲಿಷ್ ಭಾಷೆಯು ಪ್ರತಿಯೊಂದರಲ್ಲೂ ಮಿಳಿತವಾಗಿ ಕೊಡವರಲ್ಲಿ ಕೊಡವ ಭಾಷೆಯೇ ಮಾಯವಾಗುತ್ತಿದೆ.

ಮಡಿಕೇರಿಯು ಸುಖಜೀವನವ ನಿಧಿಯಾಗಿ ಕಷ್ಟತಮವಾದ ಕೆಲಸ ಕಾರ್ಯಗಳು ಗಂಡಸು ಹೆಂಗಸರಲ್ಲಿ ಸ್ವಪ್ನಪ್ರಾಯವಾಗುತ್ತಿದೆ. ವೇಷ ಭೂಷಣಗಳಂತೂ ಒಬ್ಬೊಬ್ಬರನ್ನು ಮೀರಿಸುವಂತಿದೆ. ಆಭರಣಗಳಂತೂ ವರ್ಷೇ, ವರ್ಷೆ ಬದಲಾವಣೆಯನ್ನು ಹೊಂದುತ್ತ ಚಿನ್ನವ ಕೆಲಸ ಮಾಡುವ ಅಕ್ಕಸಾಲಿಗನಿಗೆ ನಮೂನೆ, ತರಹ ಹುಡುಕುವುದರಲ್ಲೇ ಮನಸ್ಸು ಬೇಸರಿಸುವಂತಿದೆ. ಈ ವರ್ಷ ಮಾಡಿಸಿದ ಆಭರಣವು ಮಾರನೆ ವರ್ಷವೇ ಬೇರೆ ರೂಪಕ್ಕೆ ಮೆಚ್ಚಿ, ತಯಾರಿಸಲು ಕೊಡಲಾಗುತ್ತಿವೆ. ನಮೂನೆಯ ಪೋಟೊ ಪೋಟೆಗಳ ಪ್ರತಿ ಮನೆಯ ಮುಂಜಾನೆಯ ಪ್ರಥಮ ಸ್ವರವಾಗಿ ಹೋಗಿವೆ.

ಬಟ್ಟೆ ವ್ಯಾಪಾರಿಗಳಂತೂ ತರಪವಾರಿ ಜರತಾರಿ ರೇಶ್ಮೆ ಶೀರೆಗಳಿಂದ ಎಲ್ಲರ ಮನಸ್ಸನ್ನು ತಲಾಮಲಕಪಡಿಸುತ್ತಾರೆ. ಇಂದು ಕೊಂಡ ಶೀರೆಯು ನಾಳೆಗೆ ಮೆಚ್ಚುಗೆ ತಪ್ಪಿ ಉಪಯೋಗಿಸಲನರ್ಹವಾಗಿ ನಿಲುವದು. ಅಂತು ತನ್ನ ಆತ್ಮವನ್ನು ಮೆಚ್ಚಿಸದೆ ಇತರರನ್ನು ಮೆಚ್ಚಿಸುವುದರಲ್ಲಿ ದಿನವೂ, ವರ್ಷವೂ ಬೇಗ ಬೇಗ ಸರಿಮಾಹೋಗುತ್ತಿದೆ. ಚಿನ್ನದ ಬೆಲೆಯು ಏರಿದರೂ ಆಭರಣಗಳ ಆಶೆಯು ಕಡಿಮೆಯಾಗಲಿಲ್ಲ. ಭತ್ತದ ಬೆಲೆಯು ಪೂರಾ ಕನಿಷ್ಟವಾದರೂ, ಕಾಫಿಯ ಬೆಲೆಯು ಎಡೆಯನ್ನೊಡೆಯುತ್ತಿದ್ದರೂ ಆಭರಣ ಮತ್ತು ಬಟ್ಟೆಯ ಕೊಳ್ಳುವಿಕೆಯ ರಭಸವು ಕಡಿಮೆಯಾಗಲಿಲ್ಲ.

ರೈತನ ಪರಿಸ್ಥಿತಿಯು ಪ್ರಪಂಚದಲೆಲ್ಲಾ ವಿಶಮಾವಸ್ಥೆಯನ್ನು ಪಡೆದಿದೆ. ಕಾರಣವು ಬೆಳೆದ ಜಿನಸಿಗೆ ಧಾರಣೆ ಇಲ್ಲವೆಂದು ಹೇಳುವದಾದರೂ ರೈತನ ಬಿಸಿರಕ್ತವನ್ನು ಹೀರಿ ನಿಶ್ಚೇತನನಾಗಿ ಮಾಡಿರುವುದು **ದುಂದುಗಾರಿಕೆ.** ಕೃತಕ ಆಹಾರ ವಿಹಾರಗಳಿಗೂ ವೇಷ ಭೂಷಣಾದಿಗಳಿಗೆ ಮನಮರಗಿ, ಆಶಾಲಂಪಟರಾಗಿ ಮಾಡಿದ ದುಂದುಗಾರಿಕೆಗೆ ಉತ್ತರವೀಯಲು ಸಮಯವು ದೂರವಿಲ್ಲ.

ಇಂದು ಕೊಡಗಿನ ಏಳಿಗೆಯು ಸ್ತ್ರೀಯರ ಕೈಯಲ್ಲಿದೆ. ಸ್ತ್ರೀಯರು ದೇಶದ ಕಲ್ಯಾಣಕ್ಕಾಗಿ ಮುಂದೆ ಬರಬೇಕು. ಆ ನರು ಮಾಡಬೇಕಾಗಿರುವ ಮಹಾದುಪ ಕ್ಕಾರವು ಒಂದೆ. ರಾಜಪೂತ ಸಿಂಹಗಳು ಮಾನಾಪಮಾನಕ್ಕಾಗಿ ಹೋರಾಡುವಾಗ್ಯೆ ಅ ರ ಸ್ತ್ರೀಯರು ಮುಂದೆ ಬಂದು ತಮ್ಮ ಗಂ ರಣರಂಗದಲ್ಲಿ ಧೈರ್ಯ ಹೇಳಿ ಸ್ಫೂರ್ತಿ ಮಾಡಲಿಲ್ಲವೇ? ಕೊಡಗಿನ ಸ್ಥಿತಿಯು ವಿಷಮಾವಸ್ಥೆಯನ್ನು ಹೊಂದಿರುವಾಗ್ಯೆ ಕ್ಷತ್ರಿಯ ರಕ್ತವನ್ನು ನರನಾಡಿಗಳಲ್ಲೆಲ್ಲಾ ತುಂಬಿ ತೇಜಸ್ಸಿನಿಂದ ಮೆರೆಯುವ ಕಡುಗಲಿಗಳಾದ ಕೊಡಗಿನ ಕರ್ನಿಕಾಂಬಿಕೆಯರು ಪರಿಸ್ಥಿತಿಯನ್ನು ಹೋಗಲಡಿಸಲು ಮುಂದೆ ಬರಬೇಕು. ದುಂದುಗಾರಿಕೆಯನ್ನು ತಪ್ಪಿಸಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕು. ಉತ್ಪತ್ತಿಯ ಖರ್ಚಿನ ಪಟ್ಟಿಯೊಂದನ್ನು ತಯಾರು ಮಾಡಿಕೊಂಡಲ್ಲಿ ಕೊಡಗೂ ಯಾವಾಗಲೂ ತಲತಗ್ಗಿಸಬೇಕಾಗದಿಲ್ಲ. ಮನೆಯ ಏಳಿಗೆಗೆ ಸ್ತ್ರೀಯರೇ ಕಾರಣಭೂತರು. ಮನೆಯ ಯಜಮಾನನು ಕಷ್ಟದಿಂದ ನರಳಬೇಕಾದಲ್ಲಿ "ಆದಕ್ಕೆ ಮನೆಯ ಕಾರ್ಯಕ್ರಮವನ್ನು ನಡೆಸುವ ಹೆಂಗಸೇ ಕಾರಣಕರ್ತಳೆಂದು ಪ್ರತಿಯೊಬ್ಬರೂ ಒಪ್ಪಿಕೊಳ್ಳಲೇ ಬೇಕಾಗಿದೆ. ಇತರರನ್ನು ಮೆಚ್ಚಿಸಲು ಸಾಲ ಮಾಡುವುದೆಂಬುದು ಕುಚ್ಚು ಮಾತು. ದುಂದುಗಾರಿಕೆಯನ್ನು ತಪ್ಪಿಸಲು ಸರ್ವರೂ ಪ್ರತಿಜ್ಞೆಯನ್ನು ಪಡೆದುಕೊಳ್ಳಿ. ಸಾಲಮಾಡಿ ತಿಂದ ಚಿರೋಟಿಗಿಂತಲೂ ಸಂಪಾದಿಸಿ ತಿಂದ ಅಸಲಕ್ಕಿಯೇ ಮೇಲು.

ಕೊಡಗಿನ ಉತ್ಪತ್ತಿಯೊದರೂ ಏನು? ಭತ್ತ, ಕಾಫಿ, ಯಲಕ್ಕಿ, ಮೆಣಸು, ಕಿತ್ತಳೆ. ಇವರ ಬೆಳವಣಿಗೆ ಹೇಗಿದೆ? ಹಾಸ್ಯಾಸ್ಪದವಾಗಿದೆ. ಧಾರಣೆವಾಸಿಯಂತೂ ಉತ್ಸಾಹಿ ರೈತನನ್ನು ನಿರುತ್ಸಾಹಿಯನ್ನಾಗಿ ಮಾಡುತ್ತಿದೆ. ಧಾರಣೆವಾಸಿ ಕಡಿಮೆಯಾಗಿ ಉತ್ಪತ್ತಿಯು ಕಡಿಮೆಯಾದ ಕಾರಣ ಜಮಿನ್ದಾರನ ಶಕ್ತಿಯು ಕುಂದಿತು. ಅನೇಕ ವಿಧವ ಕಾಯಿಲೆಗಳು ತಲೆದೋರ ಲಾರಂಭಿಸಿದುವು. ಮುಂದಿನ ಪ್ರಜೆಗಳಾಗುವ ಬಾಲಕರ ಶಕ್ತಿಯೂ ಕಡಿಮೆಯಾಗಲು ಅನೇಕ ಕಾರಣಗಳಿವೆ. ಜಾನುವಾರುಗಳು ಉಚ್ಚ ಸ್ಥಾನವನ್ನು ಪಡೆದಿಲ್ಲ. ಜನಜಾನುವಾರುಗಳು ವೃದ್ಧಿ ಹೊಂದಿದ ಹೊರತು ದೇಶವು ಸುಬಿಕ್ಷದಿಂದ ಮೆರೆಯದು.

ಆಗಲೇ ಕೊಡಗಿನ ಅಲ್ಪ ಸ್ವಲ್ಪ ವ್ಯವಸಾಯವೂ ಟ್ರಾವನ್‌ಕೂರ್ ನೇಶನಲ್ ಮತ್ತು ಕ್ವಿಲನ್ ಬ್ಯಾಂಕ್ ಕಂಪೆನಿಯವರ ವಶವಾಯಿತು. ಇದು ಅನೇಕರ ಗನ್ನದ ಸ್ವರವನ್ನು ಕರೆಯುತ್ತಿದೆ.

ಕೊಡಗಿನ ಬೊಕ್ಕಸವನ್ನು ಬರಿದು ಮಾಡುತ್ತಿರುವುದು ಆಭರಣ ಮತ್ತು ಬಟ್ಟೆ ಕೊಡಗಿನವರನ್ನು ಕಡುಬಡವರನ್ನಾಗಿ ಮಾಡುತ್ತಿರುವದು ದುಂದುಗಾರಿಕೆ. ಮಿತವ್ಯಯ, ಸಂಘಶಕ್ತಿ, ಪ್ರೀತಿ, ಒಲುಮೆ ಇವುಗಳನ್ನು ಕಾಪಾಡಲು ಸರ್ವರೂ ಮುದುಕ ಬಾಲಕರಾದಯೊಗಿ ಸ್ಕೌಟ್ ಸಂಸ್ಥೆಗೆ ಸೇರಿ ಹತ್ತು ವಿಧಿಗಳನ್ನು ಪರಿಪಾಲಿಸಲು ಪ್ರಯತ್ನಪಡಿ. ಮನಸ್ಸು ನಿರ್ಮಲವಾಗಿ ಪಕ್ವವಾಗುವುದು. ಸ್ಕೌಟ್ ಉಡುಪನ್ನೇ ದಿನವೂ ಧರಿಸಿ. ಖರ್ಚು ಕ್ಷೋತೆಯೊಗುವುದು. ಕೆಲಸ ಕಾರ್ಯಗಳಿಗೂ ಅನುಕೂಲವಾಗುವುದು. ನೆರೆ ಹೊರೆಯವರಲ್ಲಿ ವಿಶ್ವಾಸವೂ, ಸಹೋದರ ಭಾವವೂ ಬೆಳೆಯುವುದು.

ಹೆಂಗಸರೆಲ್ಲರೂ ಗರ್ಲ್‌ಗಾಯಿಡ್ ಕ್ರಮವನ್ನೇ ಅನುಸರಿಸಿ ಅದಕ್ಕೆ ಸಂಬಂಧಪಟ್ಟ ಉಡುಪನ್ನೇ ಉಡಲು ಪ್ರಾರಂಭಿಸಿ. ಗರ್ಲ್‌ಗಾಯಿಡ್ ಉಡುವ ಶೀರೆಯು ನೇರಳೆ ಬಣ್ಣದ ಮುದ್ರಾಕ್ಷಿ ಅಂಚಿನ ಶೀರೆ, ಖರೀದಿ ಅತ್ಯಲ್ಪ. ಕೊಡಗು ದೇಶದ ಗಂಡಸರು ಹೆಂಗಸರೆಲ್ಲರೂ ಸ್ಕೌಟ್ ಮತ್ತು ಗರ್ಲ್‌ಗಾಯಿಡ್ ಆಗಿ ಹತ್ತು ಧರ್ಮವನ್ನು ಪಾಲಿಸುತ್ತಾ ಸಹೋದರ ಭಾವದ ಪ್ರೀತಿಯನ್ನು ಎಲ್ಲೆಲ್ಲು ಸಾರುತ್ತಾ ದುಂದುಗಾರಿಕೆಯನ್ನು ನಾಮಾವಶೇಷವನ್ನಾಗಿ ಮಾಡಿ ಪ್ರಪಂಚಕ್ಕೆ ಒಂದು ಮೇಲ್ಪಂಕ್ತಿಯನ್ನು ಹಾಕುವರೆಂದು ನಂಬುವೆನು.

ಡಿಸ್ಟ್ರಿಕ್ಟ್ ಬೋರ್ಡುಗಳು.

(ಗಾಂಧಿಯವರ ಲೇಖನ.)

ಡಿಸ್ಟ್ರಿಕ್ಟ್ ಬೋರ್ಡುಗಳು ಮತ್ತು ಮುನ್ಸಿಪಲ್ ಕೌನ್ಸಿಲುಗಳು ಜನರ ಮೇಲೆ ಅಪ್ರಯೋಜಕವಾದಂತ ಕಂದಾಯಗಳನ್ನು ಹಾಕುವ ಸಂಸ್ಥೆಗಳೆಂದು ನನಗೆ ಆಗಾಗ್ಯೆ ಗೋಚರವಾಗುತ್ತಿತ್ತು. ಇದು ಅಸಹಕಾರ ಚಳವಳಿಯ ಕಾಲದಲ್ಲಿ ಮೇಮದಾಬಾದಿನಲ್ಲಿ ಸ್ಥಿರಪಟ್ಟಿತು. ಆದ್ದರಿಂದ ನಾನು ಜನತೆಗೆ ಈ ಕೌನ್ಸಿಲುಗಳನ್ನು ತಿರಸ್ಕರಿಸಿದರೆ ಶಾಲೆಗಳನ್ನು ನಡೆಸುವ, ಪಟ್ಟಣಗಳನ್ನು ಶುಚಿಯಾಗಿಡುವ, ಇವೇ ಮೊದಲಾದ ಮೇಲ್ಕಂಡ ಸಂಸ್ಥೆಗಳ ಕೆಲಸಗಳನ್ನು ಏನೊಂದೂ ತೊಂದರೆಯಿಲ್ಲದೆ ಮಾಡಿಕೊಳ್ಳಬಹುದೆಂದು ಭೋಧಿಸುತ್ತಿದ್ದೆನು. ಈ ನನ್ನ ಹೇಳಿಕೆಯು ಕೆಲವು ದಿನಗಳಿಗೆ ಮುಂದೆ ದೃಢಪಟ್ಟಿತು. ಸೂರತ್ ಡಿಸ್ಟ್ರಿಕ್ಟ್ ಬೋರ್ಡಿನ ಸದಸ್ಯರೊಬ್ಬರು ಒಂದು ಪ್ರಕಟಣೆಯನ್ನು ಹೊರಡಿಸಿ ಅದಕ್ಕೆ ನನ್ನ ಸಂದೇಶವನ್ನು ಬಯಸಿದ್ದರು. ಆ. ಬೋರ್ಡಿನಲ್ಲಿ 40 ಸದಸ್ಯರಿರುವರು. ಆವರಿಗೆ ನಿಶ್ಚಿತ ಸಮಯದಲ್ಲಿ ಸಭೆ ಸೇರಿ ಕೆಲವು ಖರ್ಚಿನ ವಿಷಯ ಚರ್ಚೆ ನಡೆಸುವದಲ್ಲದೆ ಬೇರೆ ಕೆಲಸವಿಲ್ಲ. ಅಸ್ಪೃಶ್ಯರಿಗೆ ಬೋರ್ಡಿನಲ್ಲಿ ಕಾಂಗ್ರೆಸ್ ಬಹುಮತವಿದ್ದರೂ ಸಹ ಜನಹಿತಕ್ಕಾಗಿ ತಮ್ಮ ಸಮಯವನ್ನು ಹೇಗೆ ಉಪಯೋಗಿಸಬೇಕೆಂಬುದು ತಿಳಿದಿಲ್ಲ. ಬೋರ್ಡಿನ ಆದಾಯವು ವ್ಯಯವನ್ನು ಸರಿಗಟ್ಟುವಂತಿಲ್ಲ. ಆದ್ದರಿಂದ ಅವರು ಈ ಪ್ರಕಟಣೆಯಲ್ಲಿ ಬೋರ್ಡಿನ ಮೆಂಬರುಗಳು ಮತ್ತು ನೌಕರರು ಏಪ್ರಿಲಿನಲ್ಲಿ ರಾಷ್ಟ್ರೀಯವಾರವನ್ನಾಚರಿಸಿ ಆ ವಾರ ರಸ್ತೆ ರಿಪೇರಿ ಕೆಲಸಗಳನ್ನು ಮಾಡಬೇಕೆಂದು ನಮೂದಿಸಿದ್ದರು. ಏನೂ ಇಲ್ಲದ ಪರಿಸ್ಥಿತಿಯಲ್ಲಿ ಇಷ್ಟೊಂದು ಕಾರ್ಯಕ್ರಮವೂ ಡಿದ್ದು ಹೊಗಳತಕ್ಕದ್ದೇ. ಆದರೆ ನನಗೆ ಅದು ಸಾಲದೆಂದು ತೋರಿತು. ಆದ್ದರಿಂದ ನಾನು, ನನ್ನ ಸಂದೇಶವು ನಿಮಗೆ ಬೇಕಿದ್ದರೆ ನೀವು ಈ ದಿನದಿಂದಲೇ ಕೆಲಸಕ್ಕೆ ಪ್ರಾರಂಭಿಸಬೇಕು. ಒಂದು ವಾರದ ಕೆಲಸವು ಸಾಲದು. ನಿಮ್ಮ ಆಫೀಸಿನ ಅವಧಿಯು ಮುಗಿಯುವ ವರೆಗೆ ವೇತನದ ನೌಕರರಂತೆ ಕೆಲಸ ಮಾಡಬೇಕು. ಬೇರೆ ಮಾತಿನಲ್ಲಿ ಹೇಳುವದಾದರೆ ರಾಷ್ಟ್ರೀಯ ಸೇವೆಗೆ ನೀವು ತಯಾರಿರಬೇಕು. ನೀವು ಮೊಟಂಗುಗಳಲ್ಲಿ ಸೇರುವದು ಪ್ರಾಮುಖ್ಯ ವಿಚಾರಗಳ ಬಗ್ಗೆ ಮತಕ್ಕೊಡುವದಕ್ಕಾಗಿ ಅಲ್ಲದೆ ಸಣ್ಣ ಉದ್ಯೋಗಗಳ ಆಹವ ಇನ್ನಾವ ವಿಚಾರ ಚರ್ಚೆ ನಡೆಸಲಿಕ್ಕಲ್ಲ. ನಿಮ್ಮ ನಿಜವಾದ ಮತ್ತು ಪ್ರಾಮುಖ್ಯವಾದ ಕೆಲಸವು ಹೊರಗಿದೆ. ನೀವು ನಿಮ್ಮ ಪ್ರಯತ್ನದಿಂದ ಕಟ್ಟಿದ ಒಳ್ಳೇ ರಸ್ತೆಗಳು, ಉತ್ತಮ ರೀತಿಯಿಂದ ನಡೆಸಲ್ಪಡುವ ಶಾಲೆಗಳು, ಗ್ರಾಮಗಳಿಗೆ ನೀರಿನ ಸಲಕರಣೆ, ಭೂಮಿ ವ್ಯವಸಾಯದ ವಿಚಾರ ಇವುಗಳ ಬಗ್ಗೆ ಹೆಮ್ಮೆಪಡಬೇಕು. ಜನತೆಗೆ ಶುಚಿತ್ವದ, ಪಾನನಿರೋಧದ ಮಹತ್ವಗಳನ್ನು ಮನವಟ್ಟುಪಡಿಸಬೇಕು, ಯುವಕರಿಗಾಗಿ ರಾತ್ರಿ ಶಾಲೆಗಳನ್ನು ಏರ್ಪಡಿಸಬೇಕು, ಆಗ ನೀವು ಈ ಕೆಲಸಗಳಿಗೆ ಹೆಚ್ಚಿನ ಜನರು ಬೇಕೆಂಬುದನ್ನು ತಿಳಿಯುವಿರಿ. ಇದರಿಂದ ನೀವು ಬೇರೆ ಬೋರ್ಡುಗಳಿಗೆ ಮಾದೆರಿಯಾಗುವಿರಲ್ಲದೆ ನಿಮ್ಮ ಓಟರುಗಳ ಕೇಳಿಕೆಯನ್ನು ಸಲ್ಲಿಸಿದಂತಾಗುವದು. ಈ ಪರಿಣಾಮದಿಂದ ಓಟರರಿಗ ಳೂ ನಿಮ್ಮ ಕಾರ್ಯದಲ್ಲಿ ಸಹಾಯಮಾಡಿ ಜನತೆಯೇ ಹುರುಪನ್ನೊಳಗೊಳ್ಳುವದು. ನಾನು ಹೇಳುತ್ತಿರುವದನ್ನು ನೀವು ಮನಸ್ಸಿಗೆ ತೆಗೆದುಕೊಂಡದ್ದೇ ಆದರೆ ನಿಮಗೆ ನೂಲುವ, ನೇಯುವ ಕೆಲಸಗಳ ಅವಶ್ಯಕತೆಯು ಕಂಡುಬರದಿರದು. ಇದು ಎಲ್ಲಾ ಬಾಲಕ ಬಾಲಕಿಯರಿಗೇ ಅಲ್ಲ ಪ್ರತಿಯೊಬ್ಬನಿಗೂ ತನ್ನ ಆರಾಮ ಸಮಯದಲ್ಲಿ ಕೆಲಸ ಕೊಡುವದು. ಇದರಿಂದ ನಿಲಭವಾಗಿ ಲಕ್ಷೋಪಲಕ್ಷ ರೂಪಾಯಿಗಳು ಗ್ರಾಮಪಲ್ಲಿ ಹುಟ್ಟುವದು. ಈ ಕಾರ್ಯಕ್ರಮಗಳನ್ನು ಸಲ್ಲಿಸಿದಂದು ನನ್ನ ಆಶೀರ್ವಾದವು ನಿಮಗೆ ಸಿಗುವದು. ಆಗ ನಾನು ನಿಮ್ಮ ಪ್ರಕಟಣಾ ಏಜಂಟನಾಗಿ ಕಾರ್ತಿಸುವೆನು. ನಿಮಗೆ ಇದು ಸಾಧ್ಯವಿಲ್ಲದ ಪಕ್ಷ ನಿಮ್ಮ ಈ ರಜಾ ದಿನದಂತೆ ಕಾರ್ಯಕ್ರಮದಿಂದ ಏನೊಂದು ಪ್ರಯೋಜನವಿಲ್ಲೆಂಬುದನ್ನು ತಿಳಿಯಿರಿ.

ಈ ಮೇಲೆ ನಾನು ಹೇಳಿರುವ ಕಾರ್ಯಕ್ರಮಗಳನ್ನು ಭಾರತದ ಎಲ್ಲಾ ಡಿ ಬೋರ್ಡುಗಳೂ ಅನುಮೋದಿಸಲಾರವೆಂದು ನನಗೆ ಗೊತ್ತು. ಆದ್ದರಿಂದ ಕಾಂಗ್ರೆಸ್ ಅಧಿಕಾರವಿರುವ ಪ್ರಾಂತಗಳಲ್ಲಿ ಇದನ್ನು ಜಾರಿಗೆ ತಂದು ಮಾದರಿಯೊಗಬಹುದ್ದಾದ ಅನುಕೂಲವಿದೆ. ಎಲ್ಲಾ ಸದಸ್ಯರೂ ಈ ಕಾರ್ಯಕ್ರಮವನ್ನು ಮಾಡಲಾಗುವದಲ್ಲ. ಪ್ರತಿ ಸದಸ್ಯರಿಗೆ ಒಂದೊಂದು ಕೆಲಸದ ಎಚ್ಚರಿಕೆ ಕೊಡಬಹುದು. ಇದು ಡಿ. ಬೋರ್ಡುಗಳ ವಿಚಾರದ ನನ್ನ ಸಾಮಾನ್ಯ ಕಾರ್ಯಕ್ರಮ. ಕಾಂಗ್ರೆಸು ಇಂದು ಅಮೋಘವಾಡ ಮಜಾಣ್ಮೆಯ ಹೋರಾಟದ ಸಂಸ್ಥೆ. ಅ ಎಲ್ಲಾ ಕೆಲಸ ಕಾರ್ಯಗಳೂ ಅಹಿಂಸತ್ವದ ಆಧಾರದಿಂದ ಉಚ್ಚವಿಸಿದವುಗಳಾರಬೇಕು. ಆದ್ದರಿಂದ ಎಲ್ಲಾ ಸಂಸ್ಥೆಬೋರ್ಡು ಯ, ಕೌನ್ಸಿಲುಗಳಲ್ಲಿಯೂ ಒಂದೇ ತರದ ಉದ್ದೇಶವಿರಬೇಕಲ್ಲದೆ, ಪ್ರತಿಯೊಂದಕ್ಕೂ ಸರಿಪಣಿಯಂತೆ ಸಂಬವಿರಬೇಕು. ಇದು ಕ್ಷಾಂಗ್ರೆಸಿನ ಒತದ ಧ್ಯೇಯವನ್ನು ತೋರಿಸುವದು.

ಪರರಾಷ್ಟ್ರಗಳಲ್ಲಿ ನಡೆಯುತ್ತಿರುವುದೇನು?

ಬ್ರಿಟನ್.

ಇಂದು ಬ್ರಿಟಿಷರ ಪರ ರಾಷ್ಟ್ರ ನೀತಿ ಎಂಥಾದ್ದೆಂದು ಯಾರಿಗೂ ತಿಳಿಯಬರುವಂತಿಲ್ಲ. ಈಗ ಬಹುಕಾಲದಿಂದ ಸುಖಿಯೂಗಿ ಆಳಿ, ಬಾಳಿದ ಬ್ರಿಟನು ಇಂದು ಮುಪ್ಪಾಗಿ ಯಾವ ಘೋರಣೆಯನ್ನೂ ನಿಶ್ಚಿತವಪಡಿಸದೆ ತಿಂಧಕಾರದ ಹಾದಿಯಲ್ಲಿ ತತ್ತರಿಸುತ್ತಿರುವಮು. ಜಗತ್ತಿನಲ್ಲಿ ಆಳಿಕೆಗಾಗಲೀ, ರಾಷ್ಟ್ರಗಳಿಗಾಗಲೀ ಅಥವಾ ಇನ್ನಾವುದಕ್ಕಾಗಲೀ ಮುಪ್ಪು ಒಂದಲ್ಲ ಒಂದು ದಿನ ಬಂದೇ ಒರುವದು ಪ್ರಕೃತಿ ನಿಯಮವಾಗಿದೆ. ಅದರಂತೆ ಇಂದು ಬ್ರಿಟನು ಮುಪ್ಪಿನಲ್ಲಿ ಕಾಲಿಟ್ಟು ತನ್ನ ಸ್ವಾಭಿಮಾನವನ್ನು ಕಳಿಮಕೊಂಡಿದೆ. ಆದ್ದರಿಂದಲೇ ಇಂದು ಯೌವ್ವನದಲ್ಲಿ ಕಾಲಿಡುತ್ತಿರುವ ಜರ್ಮನಿ ಇಟಲಿಗಳು ಬ್ರಿಟನಿನ ಮುದಿ ಸಿಂಹಿಣಿಯನ್ನು ಹಿಡಿದು ಜಗ್ಗುತ್ತಿವೆ. ಆದ್ದರಿಂದ ಇಂದು ಬ್ರಿಟನು ತನ್ನ ಅಂಜು ಬುರುಕತನವನ್ನು ತೋರಿಸಿ ಎಲ್ಲಾ ರಾಷ್ಟ್ರಗಳ ಹಾಸ್ಯಕ್ಕೀಡಾಗಿದೆ. ಆದರೆ ಬ್ರಿಟಿಷರು ಹೊರಗೆ ಸೌಮ್ಯಮೂರ್ತಿಗಳಾಗಿದ್ದರೂ ಒಳಗೊಳಗೆ ಸೈನ್ಯ ಸನ್ನಾಹವನ್ನಂತೂ ಮಾಡುತ್ತಿರುವರು. ಈಗ ವಿಮಾನಗಳ ಧಾಳಿಯಿಂದ ದೇಶವನ್ನು ರಕ್ಷಿಸಲು ಬೇಕಾದ ಏರ್ಪಾಡಿಗಾಗಿ ಇಪ್ಪತ್ತು ಮಿಲ್ಲಿಯ ಪೌನುಗಳನ್ನು ಮಂಜೂರು ಮಾಡಿದೆ. ಇನ್ನು ಸೌಕಾ ಬಲವನ್ನು ಬಲಪಡಿಸುವರಂತೆ. ಈ ವರ್ಷ ಕಳೆದ ವರ್ಷಕ್ಕಿಂತ ವಿಮಾನಗಳು ಹೆಚ್ಚಾಗಿ ಇಂಗ್ಲೆಂಡಿನಲ್ಲಿ ತಯಾರಾಗುತ್ತಿರುವುದಂತೆ. ಅಂತು ಹೊರಗೆ ಸಭ್ಯತೆಯಿಂದ ವರ್ತಿಸಿ ಒಳಗಡೆ ಈ ರೀತಿಯ ಕುಯುಕ್ತಿಯನ್ನು ಮಾಡುತ್ತಿರುವ ಇದರ ಪರಿಣಾಮವೇನೆಂಬುವುದು ಕಾಲಗರ್ಭದಲ್ಲಡಗಿರುವುದಷ್ಟೆ! ಆದ್ದರಿಂದ ನಾವೂ ಮುಂದೇನು ನಡೆಯುವದೆಂಬನ್ನು ನೋಡುತ್ತಿರುವ.

ಜರ್ಮನಿ ಮತ್ತು ಇಟಲಿ.

ಆಸ್ಟ್ರಿಯಾವನ್ನು ಜರ್ಮನಿ ನುಂಗಿತು. ನಂತರ ಝುಕೊಸ್ಲೊವಾಕಿಯಾದ ಬೆನ್ನು ಮೂಳೆಯನ್ನು ಮುರಿಯಿತು. ಇನ್ನೇನೂ ನನಗೆ ಇಚ್ಛೆ ಇಲ್ಲವೆಂದು ಬಹಿರಂಗವಾಗಿ ಘೋಷಿಸಿಯೂ ಆಯಿತು. ಆದರೆ ಇತ್ತಲಾಗಿ ಅದು ತನ್ನ ಆಂತರಿಕ ಇಚ್ಛೆಯನ್ನು ಹೊರಡಿಸಿತು. ಬ್ರಿಟಿಷರ ಅಧೀನದಲ್ಲಿರುವ ದಕ್ಷಿಣ ಆಫ್ರಿಕದ ಪಸಾಹತುಗಳನ್ನು ಬಿಟ್ಟುಕೊಡಬೇಕೆಂದು ಕೇಳಿದೆ. ಇದರಿಂದ ಬ್ರಿಟನು ತಬ್ಬಿಬ್ಬಾಗಿದ್ದರೂ, ಪಾರ್ಲಿಮಂಟಿನಲ್ಲಿ ಯಾವ ಭಾಗಗಳನ್ನೂ ಬಿಟ್ಟುಕೊಡುವದು ಹಿತವಲ್ಲವೆಂಬ ಭಾಷಣಗಳಾಗಿವೆ. ಈ ಮಧ್ಯೆ ಇಟಲಿಯು ತನ್ನ ಮಿತ್ರನಾದ ಜರ್ಮನಿಯು ಹೇಗೆ ಮುಂದುವರಿಯುತ್ತಿರುವುದನ್ನು ಕಂಡು ಅಸೂಯೆಯಿಂದಲೋ ಎಂಬಂತೆ ಇಥಿಲಿಯು, ಫ್ರೆಂಚರು ಟ್ಯೂನಿಸನ್ನು ಬಿಟ್ಟು ಕೊಡಬೇಕೆಂದು ಗದರಿಸಿತು. ಅಷ್ಟೆ ಅಲ್ಲದೇ ಫ್ರೆಂಚರಿಗೂ, ಜರ್ಮನರಿಗೂ ಮುಂಚಕ್ಕೆ ತಪ್ಪುಗಳಗೆಯುಂಟಾಗುವ ಸಂಭವವಿಲ್ಲವೆಂಬರ್ಥದ ಒಪ್ಪಂದವಾಗಿದ್ದರೂ ಇಟಲಿಯಾನರು ಟ್ಯೂನಿಸನ್ನು ಬಿಟ್ಟು ಕೊಡಬೇಕೆಂದು ಕೇಳುವ ಕೇಳಿಕೆಯನ್ನು ಸಮರ್ಥಿಸಿ, ಅವರಿಗೆ ಸಹಾಯ ಮಾಡುವದೆಂದು ತಿಳಿಸಿದ್ದಾರೆ. ಅಂದು ಜರ್ಮನಿ-ಇಟಲಿಗಳೆರಡೇ ಎದುರು ನಿಂತಿದ್ದಾಗ ಹೆದರಿ ಶರಣಾಗತರಾದ ಬ್ರಿಟಿಷ್-ಫ್ರೆಂಚರು ಇಂದು ಯೂರೋಪು ಖಂಡವೇ ನಾಜಿಗಳ ಪ್ರಭಾವಕ್ಕೊಳಗಾಗುತ್ತಿರುವಾಗ ಧೈರ್ಯಗೊಳ್ಳುವುದುಂಟೇ? ಆದ್ದರಿಂದ ಯುದ್ಧವಿಲ್ಲದೇನೇ ಇಟಲಿಯ ಕೇಳಿಕೆಯು ನೆರವೇರಬಹುದು. ಬ್ರಿಟಿಷ್ ಪ್ರಧಾನರಾದ ಚೆಂಬರ್ಲೇನರೂ ಈಗಾಗಲೇ ಬ್ರಿಟಿಷ್ ಸೋಮಾಲಿಲ್ಯಾಂಡನ್ನು ದಾನ ಮಾಡಿಯಾದರೂ ಅವರ ಸ್ನೇಹವನ್ನು ಕಾಯ್ದುಕೊಳ್ಳೋಣವೆಂದು ಚಡಪಡಿಸುತ್ತಿದ್ದಾರೆ.

ಚೈನಾ-ಜಪಾನ್.

ಅವಿಶ್ರಾಂತಿಯಿಂದ ಈ ವರೆಗೆ ಯುದ್ಧವು ನಡೆದುಹೋಯಿತು. ಚೀನಿಯರು ತಮ್ಮ ದೇಶ ಪ್ರೇಮದ ಮಹಿಮೆಯನ್ನು ಜಗತ್ತಿಗೆ ಬೀರಿಯೂ ಆಯಿತು. ಅಂತೂ ಯುದ್ಧವು ಕೊನೆಗಾಣದೆ ಮುನ್ನಡೆಯುತ್ತಲೇ ಇದೆ. ಈಗ ಇಂಗ್ಲಿಷರೂ ಅಮೇರಿಕದವರೂ ಚೈನಾಕ್ಕೆ ಸಾಲಕೊಡಲೊಪ್ಪಿರುವರು. ಇದನ್ನು ಕೇಳಿ ಜಪಾನರ ಎದೆ ಬಿರಿಯುವಂತಾಗಿದೆ. ಈ ಮಧ್ಯೆ ಯೂರೋಪ್ಯ ರಾಷ್ಟ್ರಗಳು ಸೇರಿ ಜಪಾನು-ಚೈನಾ ಯುದ್ಧವನ್ನು ಒಪ್ಪಂದ ಮಾಡಿಸಬೇಕೆಂದು ಪ್ರಯತ್ನಿಸುತ್ತಿವೆ. ಈ ಮಧ್ಯಸ್ಥಿಕೆಯಿಂದ ಜಪಾನಿಗೆ 1894-95 ರಲ್ಲಿ ಲಿಪಿ ನಷ್ಟಕ್ಕಿಂತ ಏಪರೀತವಾಗುವದೆಂದು ತಿಳಿದು ಕಳವಳಗೊಂಡಿದೆ. ಈಗ ಮುಂದಿನ ಗಂಡಾಂತರದಿಂದ ಜಗತ್ತನ್ನು ಪಾರು ಮಾಡಲು ಪ್ರಬಲ ರಾಷ್ಟ್ರಗಳು ಕೈ ಹಾಕಬಹುದು. ಇದು ಜಪಾನಿಗೆ ಸಮಾಧಾನವಿಲ್ಲ. ಚೀನವನ್ನು ಹದಗೆಡಿಸಬೇಕೆಂಬ ಪ್ರಯತ್ನದಿಂದ ಜಪಾನು ಯುದ್ಧವನ್ನು ಒತ್ತರದಿಂದ ನಡೆಸುತ್ತಿದೆ.

ರಷ್ಯಾ-ಜಪಾನ್ ಯುದ್ಧವೇ?

ಮೆಂಚುಕೋವಿನ ಗಡೀ ನಾಡಿನಲ್ಲಿ ರಷ್ಯಾದವರು ತಮ್ಮ ಸೈನ್ಯವನ್ನು ಸಂಗ್ರಹಿಸಿದ್ದಾರೆಂದು ಜಪಾನರು ತಿಳಿದಿರುವರು. ರಷ್ಯದ ಸೈನಿಕರ ಪಟ್ಟಿನ ರುಚಿಯನ್ನು ಈ ಮೊದಲು ಚೆಂಗ್‌ಫೆಂಗಿನಲ್ಲಿ ಜಪಾನರು ನೋಡಿದ್ದಾರೆ. ಈಗ ರಷ್ಯಾಕ್ಕೂ, ಜಪಾನಿಗೂ ರಷ್ಯಕ್ಕೆ ಸೇರಿದ ಸಮುದ್ರದಲ್ಲಿ ಮೀನು ಹಿಡಿಯುವ ಸಂಬಂಧ ಮನಸ್ತಾಪ ಉಂಟಾಗಿದೆ. ಜಪಾನು ದುಡುಕಿದರೆ ರಷ್ಯಾವು ಬಡಿಯುವುದು ಖಂಡಿತ. ರಷ್ಯಾ-ಜಪಾನು ಕದನವಾದರೆ ಚೈನೀಯರ ಸಂಕಷ್ಟ ನಿವಾರಣೆಯಾದೀತು. ಅಂತು ಮುಂದಿನ ಪರಿಸ್ಥಿತಿಯೆಲ್ಲಾ ಕಾಲಗರ್ಭದಲ್ಲಿ ಅಡಗಿದೆ.

ಹೈದರಾಬಾದಿನಲ್ಲಿ ಸತ್ಯಾಗ್ರಹ ನಿಲ್ಲಬೇಕು

(ಮ. ಗಾಂಧಿಯವರ ಅಭಿಪ್ರಾಯ.)

ಹೈದರಾಬಾದ್ ಸಂಸ್ಥಾನದಲ್ಲಿನ ಜನತೆಯಲ್ಲಿ ಶೇಕಡ 80ರಷ್ಟು ಹಿಂದೀಯರಿರುವರು. ಈಗ ಕೆಲವು ತಿಂಗಳುಗಳಿಂದ ಆಲ್ಲಿಯ ಜನತೆಯು ಬೇರೆ ಸಂಸ್ಥಾನಗಳಲ್ಲಿನ ಆಂದೋಲನವ ಹುರುಪಿನಿಂದಲೋ ಎಂಬಂತೆ ಜಾಗೃತಿಗೊಂಡು ಜವಾಬ್ದಾರಿ ಸರ್ಕಾರಕ್ಕೆ ಪ್ರಯತ್ನಿಸುತ್ತಿರುವದು ಎಲ್ಲರಿಗೂ ವಿದಿತವಿರುವದು. ಈಗಾಗಲೇ ಅನೇಕ ಕಾಂಗ್ರೆಸ್ ಧುರೀಣರು ಕಾರಾಗ್ರಹವನ್ನು ಪ್ರವೇಶಿಸಿರುವರಲ್ಲದೆ ಅಲ್ಲಿಯ ಸಂಸ್ಥಾನ ಕಾಂಗ್ರೆಸು, ಸತ್ಯಾಗ್ರಹವನ್ನು ಪ್ರಾರಂಭಿಸಿ ಸರ್ಕಾರವ ವರ್ತನೆಯನ್ನು ನಿಷೇಧಿಸುತ್ತಿದೆ. ಹೀಗೆ ಪ್ರಜೆಗಳು ನಡೆಸಿದ ಹೋಣೆಗಾರ ರಾಜ್ಯಪದ್ಧತಿಯ ಆಂದೋಲನವ ಮೂಲಕ ಸಂಸ್ಥಾನಗಳಲ್ಲಿನ ದಬ್ಬಾಳಿಕೆಯಿಂದ ಮಹಾತ್ಮ ಗಾಂಧಿಯವರ ಲಕ್ಷ್ಯವು ಆತ್ಯವೇಧಿಸಿದೆ.

ಹೈದರಾಬಾದ್ ಕಾಂಗ್ರೆಸ್ಸಿಗರು ಮಹಾತ್ಮ ಗಾಂಧಿಯವರನ್ನೂ, ಸರದಾರ ಪಟೇಲರನ್ನೂ ಅನೇಕ ಸಲ ಸಂದರ್ಶಿಸಿದರು. ಹೈದರಾಬಾದ್ ಶಿಷ್ಟಮಂಡಲವು ಸಂಸ್ಥಾನದಲ್ಲಿ ಆರ್ಯ ಸಮಾಜ, ಹಿಂದೂ ಮಹಾಸಭೆ, ಹಾಗೂ ಹೈದರಾಬಾದ್ ಸಂಸ್ಥಾನದ ಕಾಂಗ್ರೆಸ್ ಎಂಬ ಮೂರು ಪಂಗಡಗಳು ಸಮಿತಿಯ ಕಾರ್ಯವಿಧಾನವೆ ಅಂದೋಲನವನ್ನು ಸ್ಥಾಗಿಸುತ್ತಿರುವದಾಗಿ ಹೇಳಿತು. ಅಲ್ಲದೆ ಮೇಲಿನ ಎರಡು ಪಂಗಡಗಳು ಕಾಂಗ್ರೆಸ್ ಧ್ವಜದಡಿಯಲ್ಲಿ ಏಕೀಕರಿಸುವಂತೆ ಮಾಡಿದ ಪ್ರಯತ್ನವು ಯಶಸ್ವಿಯಾಗಲಿಲ್ಲವೆಂದೂ ಹೇಳಿದರು. ಇದಕ್ಕೆ ಉತ್ತರವಾಗಿ ಮ. ಗಾಂಧಿಯವರು ಇತ್ತಹೇಳಿಕೆಯು ಹೀಗಿದೆ:-

'ನೀವು ಸಂಸ್ಥಾನ ಕಾಂಗ್ರೆಸಿನವರಾದುದೇ ಆದರೆ ಆರ್ಯ ಸಮಾಜ ಹಾಗೂ ಹಿಂದೂ ಮಹಾ ಸಭೆಯವರು ನಿಮ್ಮೊಳಗೆ ಕೂಡುವ ವರೆಗೆ ಅಂದೋಳನವನ್ನು ತಡೆಯಬೇಕು. ಯಾಕೆಂದರೆ ಹೈದರಾಬಾದ್ ಸರ್ಕಾರವು ಈ ಅಂದೋಳನವು ಜಾತಿ ಪ್ರಧಾನವೆನ್ನುವರು. ನಾನೇ ಈ ಅಂದೋಲನದ ನಾಯಕನಾಗಿದ್ದಿದ್ದರೆ ಅದನ್ನು ಸಮ್ಯಕ್ಕೆ ನಿಲ್ಲಿಸಿ ಖಾದಿ, ಅಸ್ಪೃಶ್ಯತೆ, ಹಾಗೂ ಹಿಂದೂ-ಮುಸ್ಲಿಂ ಐಕ್ಯ ಇವುಗಳಂತ ವಿಧಾಯಕ ಕಾರ್ಯಕ್ರಮಗಳಲ್ಲಿ ತೊಡಗುತ್ತಿದ್ದೆನು. ಮೇಲಿನ ಎರಡು ಪಂಗಡಗಳು ಸ್ಟೇಟ್ ಕಾಂಗ್ರೆಸಿನೊಡನೆ ಸಂಯುಕ್ತವಾದರೆ ಸಂಸ್ಥಾನ ಕಾಂಗ್ರೆಸು ತನ್ನ ಅಂದೋಲನವನ್ನು ಪುನಹ ಪ್ರಾರಂಭಿಸಬಹುದು.'

ಈ ವಿಚಾರದಲ್ಲಿ ಈಗ ಸಂಸ್ಥಾನ ಕಾಂಗ್ರೆಸ್ಸಿನವರು ವಿಚಾರ ವಿನಿಮಯ ಮಾಡುತ್ತಿರುವರು. ಪರಿಸ್ಥಿತಿಯನ್ನು ನಿರೀಕ್ಷಿಸಬೇಕಿದೆ.

ಟ್ರಾವಂಕೂರ್ ಸಂಸ್ಥಾನದ ಕಾಂಗ್ರೆಸ್ಸಿನ ನಿರ್ಣಯಗಳು.

ಈ ಸಂಸ್ಥಾನದಲ್ಲಿ ನಡೆಯುತ್ತಿರುವ ಅತ್ಯಾಚಾರದ ಪರಮಾವಧಿಯುಷ್ಣಾಚಕರ ಚಿತ್ತಕ್ಕೆ ಬಾರದೆ ಇಲ್ಲ. ಈಗ ಸಂಸ್ಥಾನದ ಕಾಂಗ್ರೆಸ್ಸಿನವರು ತಮ್ಮಲೊಂದು ವಿಶೇಷ ಅಧಿವೇಶನವನ್ನು ಸೇರಿಸಿ ತಮ್ಮ ಚಳವಳವು ಹೇಗೆ ನಡೆಯಬೇಕೆಂಬ ಬಗ್ಗೆ ನಿರ್ಣಯಗಳನ್ನು ಹೂಡಿರುವರು.

ಅಧಿವೇಶನವು ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ. ಎ. ನಾರಾಯಣ್ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ನೆರವಿತ್ತು.

ಅಲ್ಪ ಸಂಖ್ಯಾಕ ಜಾತಿಗಳಿಗೆ ಸಂರಕ್ಷಣೆಯಿತ್ತು ಪ್ರೌಢ ಮತದಾನ ಪದ್ಧತಿಯ ಮೇರೆಗೆ ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಹೊಣೆಗಾರ ರಾಜ್ಯ ಪದ್ಧತಿಯನ್ನು ಸ್ಥಾಪಿಸುವದೇ ಸಂಸ್ಥಾನ ಕಾಂಗ್ರೆಸ್ಸಿನ ಉದ್ದೇಶವೆಂದು ಒಂದು ಗೊತ್ತು ವಳಿಯಲ್ಲಿ ಸಾರಲಾಗಿದೆ.

ಇದಲ್ಲದೆ ಸಭೆ ಮೆರವಣಿಗೆಗಳನ್ನು ಕೂಡಿಸುವದು, ಸ್ವಯಂಸೇವಕರ ಕೂಟಗಳನ್ನು ನೆರೆಯಿಸುವದು ಮೊದಲಾದ ಕಾರ್ಯಕ್ರಮಗಳನ್ನು ಕೈಕೊಂಡು ಪ್ರತ್ಯಕ್ಷ ವಿರೋಧ ಮಾಡಬೇಕೆಂಬ ನಿರ್ಣಯವಾಯಿತು. ಆಕ್ಷೇಪ್ಯ ವಾಗ್ಮಯವನ್ನು ಬಹಿರಂಗವಾಗಿ ಹಂಚುವಮು; ಸಾರಾಯಿ ಅಂಗಡಿಗಳ ಪಿಕೆಟಿಂಗ್, ಟ್ರಾವಂಕೂರ್ ಸ್ಟೇಟ್ ಪೋಸ್ಟ್‌ಆಫೀಸಿನಲ್ಲಿರುವ ಕೇವಣಾತಿಗಳನ್ನು ಹಿಂತೆಗೆಮಕೊಳ್ಳುವಮು, ಅರಮನೆಯ ಮುಂದೆ ಸತ್ಯಾಗ್ರಹ ಮಾಡುವದು, ಸರಕಾರಕ್ಕೆ ಸಲ್ಲತಕ್ಕ ಕರ ಮೊದಲಾದ ಹಣವನ್ನು ಕೊಡದೆ ಮುಷ್ಕರ ಹಿಡಿಯುವದು ಇವೇ ಮೊದಲಾದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದೂ, ಈ ಕಾರ್ಯಕ್ರಮದ ವಿವರಗಳನ್ನು ನಿಶ್ಚಿತಗೊಳಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡುವಂತೆಯೂ ನಿರ್ಣಯಗಳು ಅಂಗೀಕೃತವಾದವು.

ಸಂಸ್ಥಾನ ಕಾಂಗ್ರೆಸಿನ ವಿರುದ್ಧ ಸರ್ಕಾರದವರು ಕೈಕೊಂಡಿರುವ ಅಮಾನುಷ ದಬ್ಬಾಳಿಕೆಯ ಧೋರಣೆಯನ್ನು ಖಂಡಿಸಿ ನಿರ್ಣಯಗಳಾದವು.

ಅಂತು ಸಂಸ್ಥಾನ ಕಾಂಗ್ರೆಸು ತನ್ನ ಧ್ಯೇಯ ಸಾಧನೆ ಅರ್ಥಾತ್ ಜನತೆಯ ಉದ್ಧಾರಕ್ಕೋಸುಗ ಪ್ರಚಂಡ ಕಾರ್ಯಕ್ರಮವನ್ನು ಕೈಕೊಳ್ಳುವಂತಿದೆ. ಈ ವರೆಗೆ ಅಸಂಖ್ಯಾತ ಸತ್ಯಾಗ್ರಹಿಗಳು ಸೆರೆಮನೆಯನ್ನು ಸೇರಿರುವರು. ಸರ್ಕಾರದವರು ಪ್ರಜೆಗಳ ಕೋರಿಕೆಯನ್ನು ಸಲ್ಲಿಸದೆ ನಿರ್ದಯರಾಗಿ ಅವರನ್ನು ಸೆರೆಮನೆಗೆ ಅಟ್ಟುತ್ತಿರುವದು ಎಂದೂ ಕ್ಷೋಭಿಸುವ ಕೆಲಸವೆಲ್ಲ. ಸರ್ಕಾರವು ತನ್ನ ಅತ್ಯಾಚಾರಗಳಿಂದ ಬಂಧಿಸಿ ಜನರನ್ನು ಕುಗ್ಗಿಸಬಹುದು. ಆದರೆ ಅವರ ಆಂತರಿಕ ಭಾವನೆಯನ್ನಳಿಸಲು ಯಾಸ್ಯಾಧ್ಯವೆಂಬುದನ್ನು ಗ್ರಹಿಸಿ ಜನರ ಕೋರಿಕೆಯನ್ನು ಸಲ್ಲಿಸಿ ಸಂಸ್ಥಾನಗಳಿಗೆ ಮಾನವರಿಯಾಗುವದು ಹಿತವಿದೆ.

ಕೊ ಡ ಗು

ಡಿಸೆಂಬರ್ ತಾರೀಕು ೩೦ನೇ ಶುಕ್ರವಾರ ೧೯೩೮.

ರಾಜಕೋಟೆಗೆ ಸುಧಾರಣೆಗಳು.

ಬ್ರಿಟಿಷ್ ಇಂಡಿಯಾದಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಸ್ವಾತಂತ್ರ್ಯ ಹೋರಾಟವು ಸಂಸ್ಥಾನಿಕ ರಾಜ್ಯಗಳ ಪ್ರಜೆಗಳನ್ನು ಬಹು ಮಟ್ಟಿಗೆ ಜಾಗೃತಿಗೊಳಿಸಿದೆ. ಬ್ರಿಟಿಷ್ ಪ್ರಾಂತ್ಯಗಳಲ್ಲಿ ಜನರು ಸತ್ಯಾಗ್ರಹ ಚಳವಳಿಯನ್ನು ನಡಿಸಿದ ಫಲಿತಾಂಶವಾಗಿ ಅಲ್ಲಿಯ ಚುನಾವಣೆಗಳಲ್ಲಿ ಅವರಿಗೆ ದೊರೆತ ಜಯ ಮತ್ತು ತನ್ಮೂಲಕ ಅವರಿಗೆ ಪ್ರಾಂತೀಕ ಸರ್ಕಾರಗಳಲ್ಲಿಯೂ, ಸ್ಥಳೀಕ ಸ್ವರಾಜ್ಯಸಂಸ್ಥೆಗಳಲ್ಲಿಯೂ ಸಿಕ್ಕಿದ ಅಧಿಕಾರ, ಇದರಿಂದ ಪ್ರಜೆಗಳಿಗೆ ಉಂಟಾಗುತ್ತಿರುವ ಪ್ರಯೋಜನಕರವಾದ ಕಾರ್ಯಗಳು–ಇವುಗಳು ಎರಡು ತರದ ಗುಲಾಮಗಿರಿಯಲ್ಲಿ ನರಳುತ್ತಿರುವ ಅಶ್ರಿತ ಸಂಸ್ಥಾನಗಳ ನಿವಾಸಿಗಳ ಕಣ್ಣು ತೆರೆಸಿದವು. ಅಲ್ಲಿಯ ಜನರು ರಾಜ್ಯಭಾರದಲ್ಲಿ ತಮಗಿರುವ ಹಕ್ಕು ಬಾಧ್ಯತೆಗಳನ್ನು ಪಡೆಯಲು ಉದ್ಯುಕ್ತರಾದರು. ಅಲ್ಲಿಯ ಸರ್ಕಾರದವರು ಜನರ ಹೋರಾಟವನ್ನು ದಬ್ಬಾಳಿಕೆಯಿಂದ ಅಡಗಿಸಲು ಪ್ರಯತ್ನಿಸಿದರು; ಕೆಲವು ಕಡೆ ಈಗಲೂ ಪ್ರಯತ್ನಿಸುತ್ತಿದ್ದಾರೆ. ಇದನ್ನು ಸಹಿಸಲಾರದೆ ಅಲ್ಲಿಯ ಪ್ರಜೆಗಳು ಬ್ರಿಟಿಷ್ ಪ್ರಾಂತ್ಯಗಳಲ್ಲಿ ತಮ್ಮ ಸಹೋದರರ ವಿಧಾನಗಳನ್ನು ಹಿಂಬಾಲಿಸಿ ಸವಿನಯ ಕಾಯಿದೆಭಂಗ ಚಳವಳವನ್ನೇ ಕೈಕೊಂಡರು. ಕಾಂಗ್ರೆಸ್ಸಿನ ತೀರ್ಮಾನದಂತೆ ಬ್ರಿಟಿಷ್ ಪ್ರಾಂತ್ಯಗಳ ಜನರು ಅವರಿಗೆ ಸಹಾನುಭೂತಿಯನ್ನು ಮಾತ್ರ ತೋರಿಸಬಹುದಲ್ಲದೆ ಅವರ ಚಳವಳದಲ್ಲಿ ಭಾಗವಹಿಸಕೂಡದ್ದಾಗಿದ್ದರೂ ಕೂಡ ಅವರು ತಮ್ಮ ಸ್ವಶಕ್ತಿಯಿಂದಲೇ ತಮ್ಮ ಹೋರಾಟವನ್ನು ನಡಿಸುತ್ತಾ ಬಂದರು. ಹೀಗೆ ಸತ್ಯಾಗ್ರಹವನ್ನು ನಡೆಸಿದ ಮೈಸೂರು, ತಿರುವಾಂಕೂರು, ರಾಜಕೋಟೆ, ಹೈದರಾಬಾದ್ ಮೊದಲಾದ ಸಂಸ್ಥಾನಗಳ ಪೈಕಿ ರಾಜಕೋಟೆಯು ಒಳ್ಳೇ ಜಯವನ್ನು ಪಡೆದಿದೆ ಎಂಬುವುದರಲ್ಲಿ ಸಂಶಯವಿಲ್ಲ. ಕಾಯಿದೆಭಂಗ ಚಳವಳವು ಮೊದಲುಪ್ರಾರಂಭವಾದ ಮೈಸೂರು ಸಂಸ್ಥಾನದಲ್ಲಿ, ಜನರ ಮೇಲೆ ಅಧಿಕಾರಿಗಳು ಗುಂಡು ಹಾರಿಸಿದಷ್ಟು ತೀಪ್ರರೂಪವನ್ನು ತಾಳಿ, ರಾಜಿಯಲ್ಲಿ ತೀರ್ಮಾನವಾಗಿ, ಜನರಿಗೆ ಯಾವ ತರಹದ ಸುಧಾರಣೆ ಕೊಡಬೇಕೆಂಬುವದನ್ನು ನಿಶ್ಚಯಿಸಲು ಒಂದು ಕಮಿಟಿ ನೇಮಿಸಲ್ಪಟ್ಟು ಹಲವು ತಿಂಗಳುಗಳಾದರೂ ಇನ್ನೂ ಅಲ್ಲಿಯ ಜನರ ಕೋರಿಕೆಯು ನೆರವೇರಿಸಲ್ಪಟ್ಟಿರುವುದಿಲ್ಲ. ತಿರುವಾಂಕೂರಿನಲ್ಲಿಯೂ ಮತ್ತು ಹೈದರಾಬಾದನಲ್ಲಿಯೂ ರಾಜಿಯ ಪ್ರಯತ್ನಗಳು ನಡೆಯುತ್ತಿರುವದಾದರೂ ಯಾವುದೊಂದು ತೀರ್ಮಾನಕ್ಕೆ ಬಂದಿರುವುದಿಲ್ಲ. ಆದರೆ ರಾಜಕೋಟೆಯಲ್ಲಿ ಜನರು ಜಯಪ್ರದರಾಗಿರುವರೆಂಬುದು ಅವರಿಗೆ ಹೆಮ್ಮೆಯ ವಿಷಯವಾಗಿದೆ.

ರಾಜಕೋಟೆಯು ಬೊಂಬಾಯಿ ಪ್ರಾಂತ್ಯದಲ್ಲಿ ಒಂದು ಚಿಕ್ಕ ಸಂಸ್ಥಾನವಾಗಿದೆ. ಅದರ ಅರಸರು ಟಾಕೋರ್ ಸಾಹೇಬರು. ಅಲ್ಲಿಯ ಪ್ರಜೆಗಳು ಆಡಳಿತ ಕ್ರಮದಲ್ಲಿ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಸುಮಾರು ಐದು ತಿಂಗಳುಗಳಿಂದ ಸತ್ಯಾಗ್ರಹ ಚಳವಳವನ್ನು ಹೂಡಿ, ಹಲವರು ಜೈಲುವಾಸವನ್ನು ಕೈಕೊಂಡದ್ದಲ್ಲದೆ ಇತರ ಹಲವು ತರಹದ ಕಷ್ಟನಷ್ಟಗಳನ್ನು ಸಂತೋಷದಿಂದ ಅನುಭವಿಸಿದರು. ಅವರು ಗುಜರಾತದ ಕಾಂಗ್ರೆಸ್ ಮುಂದಾಳಾದ ಸರ್ದಾರ್ ವಲ್ಲಭಭಾಯಿ ಪಟೇಲರವರ ಮತ್ತು ಮಹಾತ್ಮ ಗಾಂಧಿಯವರ ಸಲಹೆಗಳನ್ನು ಕೇಳಿಯೇ ವರ್ತಿಸುತ್ತಿದ್ದರು. ಪಟೇಲರವರ ಮಗಳೂ ಕೂಡ ಅಲ್ಲಿ ಕೆದು ಮಾಡಲ್ಪಟ್ಟರು. ಅಲ್ಲಿಯ ದಿವಾನರು ಯೂರೋಪಿಯನರಾಗಿರುವರು. ಹೇಗೂ ಕಟ್ಟಕಡೆಗೆ ಜನರ ತ್ಯಾಗದ ಫಲಿತಾಂಶವಾಗಿ ಅವರ ಕೋರಿಕೆಯು ನೆರವೇರುವಂಥ ಒಂದು ತೀರ್ಮಾನಕ್ಕೆ ಬರಲಾಗಿದೆಯೆಂಬುದು ಸಂತೋಷದ ವಿಷಯವಾಗಿದೆ. ಟಾಕೋರ್ ಸಾಹೇಬರು ಸರ್ದಾರ್ ಪಟೇಲರವರನ್ನು ಕರಿಸಿಕೊಂಡು 8 ತಾಸುಗಳವರೆಗೆ ತಮ್ಮ ಕೌನ್ಸಿಲು ಮತ್ತು ಪಟೇಲರೊಂದಿಗೆ ಚರ್ಚಿಸಿ, ಜನರಿಗೆ ಸುಧಾರಣೆಗಳನ್ನು ಕೊಡಲು ಒಂದು ಕಮಿಟಿಯನ್ನು ನೇಮಿಸಲು ನಿಶ್ಚಯಿಸಿರುವರು. ಪ್ರಜೆಗಳಿಗೆ ರಾಜ್ಯಾಡಳಿತೆಯಲ್ಲಿ ಅಗುನಷ್ಟು ಹೆಚ್ಚಿನ ಅಧಿಕಾರವನ್ನು ಕೊಡುವುದನ್ನು ನಿಶ್ಚಯಿಸುವದೇ ಈ ಕಮಿಟಿಯ ಉದ್ದೇಶ. ಆದರೆ ತಾನೊಬ್ಬ ಅರಸನಾಗಿಯೂ, ತನ್ನ ಮೇಲಧಿಕಾರಿಯೂವ ಬ್ರಿಟಿಷ್ ಪ್ರಭುಗಳಿಗೆ ಒಳಪಟ್ಟು ಇರಬೇಕಾದ ಅಧಿಕಾರಗಳನ್ನು ಮಾತ್ರ ಕಾಪಾಡಿಕೊಳ್ಳಲಾಗುವದಂತೆ. ಈ ಕಮಿಟಿಯಲ್ಲಿ ಅಲ್ಲಿಯ ಪ್ರಜಾ ಪರಿಷತ್ತಿನ ಪ್ರತಿನಿಧಿಗಳು ಏಳು ಜನರೂ, ಟಾಕೂರ್ ಸಾಹೇಬರಿಂದ ನೇಮಿಸಲ್ಪಡುವ ಸರಕಾರ ಉದ್ಯೋಗಸ್ಥರು ಮೂರು ಜನರೂ ಮೆಂಬರುಗಳಾಗಿರುವರು. ಆದ್ದರಿಂದ ಜನರ ಪ್ರತಿನಿಧಿಗಳ ಬಹುಸುತವಿರುವ ಈ ಕಮಿಟಿಯಲ್ಲಿ ಜನರಿಗೆ ಬೇಕಾದಂತ ಸುಧಾರಣೆಗಳನ್ನು ನಿಶ್ಚಯಿಸಿಕೊಳ್ಳಲು ತುಂಬಾ ಅನುಕೂಲವಿದೆ. ಈ ಕಮಿಟಿಯವರು ಆದಷ್ಟು ಬೇಗನೆ ಅಂದರೆ ಬರುವ ಜನವರಿ ಅಖೈರೊಳಗೆ ತಮ್ಮ ವರದಿಯನ್ನು ಕೊಡಬೇಕೆಂತಲೂ, ಅವರ ಶಿಫಾರಸ್ಸುಗಳನ್ನು ಟಾಕೂರ್ ಸಾಹೇಬರು ಪೂರಾ ಜಾರಿಗೆ ತರುವರೆಂತಲೂ ಒಪ್ಪಲಾಗಿದೆ. ಆದರೆ ಜನರು ತಮ್ಮ ಸತ್ಯಾಗ್ರಹ ಚಳವಳವನ್ನು ಕೂಡಲೇ ನಿಲ್ಲಿಸಬೇಕಾಗಿದೆ. ಟಾಕೂರ್ ಸಾಹೇಬರು ರಾಜಕೀಯ ಕೈದಿಗಳೆಲ್ಲರನ್ನೂ ವಡನೆ ಬಿಡುಗಡೆ ಮಾಡುವದಲ್ಲದೆ ಅವರಿಗೆ ವಿಧಿಸಿದ್ದ ಜುಲ್ಮಾನೆಗಳನ್ನೆಲ್ಲಾ ವಜ ಮಾಡುವರು; ಮತ್ತು ರಾಜಕೀಯ ಕೆಲಸಗಾರರ ಮೇಲೆ ನಡೆಯುತ್ತಿದ್ದ ಕೇಸುಗಳನ್ನೆಲ್ಲಾ ಹಿಂತೆಗೆಯುವರು.

ಟಾಕೂರ್ ಸಾಹೇಬರವರ ಮೇಲಿನ ತೀರ್ಮಾನವು ನಿಜವಾಗಿಯೂ ಅಲ್ಲಿಯ ಜನರ ಹೋರಾಟಕ್ಕೆ ಸಂಪೂರ್ಣ ಜಯವನ್ನು ತಂದಿದೆಯೆಂಬುವರಲ್ಲಿ ಸಂಶಯವಿಲ್ಲ. ಜನರು ಅಂತ್ಯದ ವರೆಗೆ ನಡೆಸಿದ ಅವರ ಸಾಹಸ ಮತ್ತು ತ್ಯಾಗದ ಚಳವಳಕ್ಕಾಗಿ ಅವರನ್ನೂ, ಟಾಕೂರ್ ಸಾಹೇಬರು ಉದಾರ ಬುದ್ಧಿಯಿಂದ ತಮ್ಮ ಪ್ರಜೆಗಳ ಕೋರಿಕೆಗಳನ್ನು ನೆರವೇರಿಸಿಕೊಡಲು ಒಪ್ಪಿದಕ್ಕೆ ಅವರನ್ನೂ ವಂದಿಸಬೇಕಾಗಿದೆ.

ಈ ಸಂಸ್ಥಾನಾಧಿಪತಿಗಳ ಉದಾಹರಣೆಯು ಹಿಂದೂಸ್ಥಾನದ ಇತರ ಹಲವು ಸಂಸ್ಥಾನಧಿಪತಿಗಳಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಪ್ರಜಾಪ್ರತಿನಿಧಿತ್ವ ಸರಕಾರ ಪದ್ಧತಿಯು ಬ್ರಿಟಿಷ್ ಇಂಡಿಯಾದಲ್ಲಿ ಹೇಗೋ ಹಾಗೆಯೇ ಎಲ್ಲಾ ಸಂಸ್ಥಾನಗಳಲ್ಲಿಯೂ ಒಂದಲ್ಲ, ಒಂದು ದಿನ ಜಾರಿಗೆ ಬಂದೇ ಬರುವದು. ಆಂಥಾ ದಿನವು ಬಹು ದೂರವಾಗಿಲ್ಲ. ತಮ್ಮ ರಾಜಕೀಯ ಹಕ್ಕುಗಳನ್ನು ಅರಿತುಕೊಂಡಿರುವ ಜನರು ಇನ್ನು ಮುಂದೆ ಸುಮ್ಮನಿರಲಾರರು. ಎಷ್ಟು ಕಷ್ಟ ನಷ್ಟಗಳನ್ನು ಸಹಿಸಿಯಾದರೂ ಅವುಗಳನ್ನು ಪಡೆಯಲು ಅವರು ಸಾಧಿಸದೆ ಇರಲಾರರು. ಅಂದ ಮೇಲೆ ಆಳರಸರುಗಳು ಇದನ್ನು ಅರಿತುಕೊಂಡು ಮುಂದಾಲೋಚನೆಯಿಂದ ದೇಶದಲ್ಲಿ ಶಾಂತತಾಭಂಗ ಉಂಟಾಗಲಿಡೆಕೊಡದೆ ಪ್ರಜೆಗಳ ಕೋರಿಕೆಗಳನ್ನು ಸಲ್ಲಿಸಿಕೊಡುವದು ಉತ್ತಮವಾಗಿದೆ.

ಸರ್. ರಾಧಾಕೃಷ್ಣನ್‌ರವರ ಭಾಷಣ.

ಸರ್. ಎಸ್. ರಾಧಾಕೃಷ್ಣನ್ ಇವರು ಕಾಶೀ ಹಿಂದೂ ವಿದ್ಯಾ ಪೀಠದ ಪದವಿಧಾನ ಸಮಾರಂಭದಲ್ಲಿ ಒಳ್ಳೇ ಮಹತ್ವಪೂರ್ಣವಾದ ಭಾಷಣವನ್ನು ಮಾಡಿದರು. ಅವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು. ಕಾಲಮಾನಕ್ಕೆ ತಕ್ಕಂತೆ ಹಿಂದುಸ್ಥಾನವನ್ನು ಸ್ವತಂತ್ರ ಮತ್ತು ಬಲವಂತ ರಾಷ್ಟ್ರವನ್ನಾಗಿ ನಿರ್ಮಿಸುವ ಕಾರ್ಯವನ್ನು ಬ್ರಿಟಿಷರು ಒಳ್ಳೇ ದಕ್ಷತೆಯಿಂದ ವಹಿಸಬೇಕು. ಆದರೆ ಇದಕ್ಕೆ ಅವರು ತಪ್ಪಿ ನಡೆದ ಪಕ್ಷದಲ್ಲಿ ಬ್ರಿಟನ್ನಿನಷ್ಟೇ ಬಲವುಳ್ಳ ರಾಷ್ಟ್ರಗಳು ಹೇಗೆ ಅಧೋಗತಿಗೆ ಮುಟ್ಟಿದವೆಂಬದನ್ನಿಷ್ಟು ಪರೀಕ್ಷಿಸಿ ನೋಡಬೇಕು. ಅವರಂತೆ ಬ್ರಿಟನವು ಕೂಡ ಮಣ್ಣು ಪಾಲಾಗಲಾರದೆ ಎಂದೂ ಇರಲಾರದು. ಪ್ರಾಗತಿಕ ಮತ್ತು ಲೋಕಶಾಹಿ ತತ್ವಗಳನ್ನು ಎತ್ತಿ ಹಿಡಿದು ಅವುಗಳನ್ನು ಬೆಳೆಯಿಸಲು ಬ್ರಿಟನಿಗೆ ಇದೀಗ ಸುಸಮಯ ದೊರಕಿದೆ. ಸವ್ಯಕ್ಕೆ ಜಗತ್ತಿನಲ್ಲಿ 3 ಪ್ರಬಲ ರಾಷ್ಟ್ರಗಳು ಎಲ್ಲರ ನಿದರ್ಶನಕ್ಕೆ ಬರುತ್ತವೆ. ಇಂಥಾ ಸಮಯದಲ್ಲಿ ಬ್ರಿಟನವು ಲೋಕಶಾಹಿ ಮತ್ತು ಸ್ವಾತಂತ್ರ್ಯ ಇತ್ಯಾದಿ ತತ್ವಗಳನ್ನು ಬರೇ ಬಾಯಿ ಮಾತಿನಿಂದ ಆಡಿ ತೋರಿಸದೆ ಕಾರ್ಯರೂಪದಲ್ಲಿ ತರುವದೇ ಯೋಗ್ಯವೆನಿಸುವದು ಇವೇ ತತ್ವಗಳ ಮೇಲೆ ಶ್ರದ್ಧೆ ಇರುವ ಎಲ್ಲಾ ರಾಷ್ಟ್ರೀಯಗಳನ್ನು ಒಂದೆಡೆಗೆ ಕೂಡಿಸುವದು ಒಳ್ಳೇದು.

ಬ್ರಿಟನದ ಸ್ವಂತ ಕಾಯಿದೆಗಳಲ್ಲಿಯ ನ್ಯಾಯಶೀಲತೆ ಮತ್ತು ಪರ ರಾಷ್ಟ್ರೀಯ ಧೋರಣದಲ್ಲಿ ಸೌಮ್ಯತೆ ಇವೆಲ್ಲವುಗಳನ್ನು ನೋಡಿದರೆ ಹಿಂದುಸ್ಥಾನವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ನಿರ್ಮಾಣ ಮಾಡುವದು ಅತ್ಯಾವಶ್ಯವಿದೆ. ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ತ್ರಿಪುರಿ ಕಾಂಗ್ರೆಸ್ ಡೆಲಿಗೇಟರ ಚುನಾವಣೆ.

ತ್ರಿಪುರಿ ಕಾಂಗ್ರೆಸ್ ಅಧಿವೇಶನಕ್ಕೆ ಡೆಲಿಗೇಟರುಗಳನ್ನು ಚುನಾಯಿಸಲು ಈ ಕೆಳಗಿನವರು ಚುನಾವಣಾ ಅಧಿಕಾರಿಗಳಾಗಿ ನಿಯಮಿಸಲ್ಪಟ್ಟಿರುವರೆಂದೂ ಇವರೊಡನೆ ಸ್ಥಳೀಯ ಕಾಂಗ್ರೆಸಿನವರು ಸಹಕರಿಸಿ ಚುನಾವಣೆಯನ್ನು ಯಶಸ್ವಿಯಾಗಿ ಮಾಡಬೇಕೆಂದೂ ಕೇಳಿಕೊಳ್ಳಲಾಗಿದೆ.

ಧಾರವಾಡಕ್ಕೆ–ಶ್ರೀ ಶಿವಬಸಪ್ಪನವರು, ಬೆಳಗಾಮಿಗೆ–ಶ್ರೀ ಭೀಮರಾವ್, ಬಿಜಾಪುರ–ಶ್ರೀ ಮುದಕವಿ, ಕಾರವಾರ–ಶ್ರೀ ಕೊಪ್ಪಿಕಾರ್, ಮಂಗಳೂರು–ಶ್ರೀ ವಾಮನಕುಡುವ, ಬೆಳ್ಳಾರಿ–ಡಾ. ನಾಗಣ್ಣಗೌಡ, ಕೊಡಗು–ಶ್ರೀ ಐನಂಡ ಕಾರ್ಯಪ್ಪ, ಚಿತ್ತಾಲದುರ್ಗ–ಶ್ರೀ ವಾಸುದೇವರಾವ್, ಶಿವಮೊಗ್ಗ–ಶ್ರೀ ಬಿ. ಎಸ್. ಪುಟ್ಟನಂಜಪ್ಪ, ಕಡೂರು–ಶ್ರೀ ಬಿ. ವಿ. ಬಸಪ್ಪ, ಹಾಸನ–ಶ್ರೀ ಬೋರಣ್ಣಗೌಡ, ತುಮಕೂರು–ಶ್ರೀ ಸುಬ್ರಹ್ಮಣ್ಯಯ್ಯಂ, ಕೋಲಾರ್–ಶ್ರೀ ಟಿ. ರಾಮಾಚಾರ್, ಬೆಂಗಳೂರು ಡಿಸ್ಟ್ರಿಕ್–ಶ್ರೀ ಕೆ. ವೆಂಕಟರಮಣಯ್ಯ, ಬೆಂಗಳೂರು ಸಿಟಿ–ಶ್ರೀ ಕೆ. ಹನುಮಂತಯ್ಯ, ಬೆಂಗಳೂರು ಮಂಡು–ಶ್ರೀ ಬಿ. ಸುಂದರರಾವ್, ಮೈಸೂರು ಡಿಸ್ಟ್ರಿಕ್ಟ್–ಶ್ರೀ ಕೆ. ರಂಗರಾಮಯ್ಯ, ಮೈಸೂರು ಸಿಟಿ–ಶ್ರೀ ಟಿ. ಯಂ. ರಾಮಪ್ಪ. ನಾಮಪತ್ರಗಳು ಡಿ. ಕೌ. ಕಮಿಟಿಯಿಂದ ಸಿಕ್ಕುತ್ತವೆಂದೂ, ಉಮೇದುವಾರರು ಮುಕ್ತು ಡಿ. ಕಾ. ಕಮಿಟಿಯವರು ತಮ್ಮ ವ್ಯವಹಾರ ಕ್ಷೇತ್ರದ ಪಟ್ಟಿಯನ್ನು ವಡ್ಡಿ ಕಳುಹಿಸಿಕೊಡಬೇಕೆಂದೂ ಪೂರ್ತಿ ಮೆಂಬರುಗಳ ಪಟ್ಟಿಯನ್ನು ಕಳುಹಿಸದ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಪಟ್ಟಿಯನ್ನೂ, ಹಣವನ್ನೂ ತಾ. 27 ರೊಳಗೆ ಕಳುಹಿಸದ ಪಕ್ಷ ತಮ್ಮ ಪ್ರತಿನಿಧಿತ್ವವನ್ನು ಕಳಕೊಳ್ಳುವರಾಗಿಯೂ ಪ್ರಕಟಿಸಿದೆ.

ಅಲ್ಲದೆ ಜನವರಿ 8 ರಲ್ಲಿ ನಡೆಯುವ ಚುನಾವಣೆಯಲ್ಲಿ ಓಟು ಹೇಗೆ ತೆಗೆಯಬೇಕೆಂದು ಯೋಚಿಸಿ ಒಬ್ಬನಿಗಿಂತ ಹೆಚ್ಚು ಪ್ರತಿನಿಧಿಗಳ ಚುನಾವಣೆ ನಡೆಯಬೇಕಾದ ಭಾಗಗಳಲ್ಲಿ ಓಟರು ತಮಗಿಷ್ಟ ಬಂದ ಒಬ್ಬನಿಗೇ ತಮ್ಮ ಮತಪತ್ರವನ್ನೀಯಬೇಕೆಂದೂ, ಹಾಗೆ ಹೆಚ್ಚಿಗೆ ಹೆಸರು ಬರೆದವರ ಓಟು ಅಪ್ರಯೋಜನಕಾರಿಯಾಗುವದೆಂದೂ ತಿಳಿಸಿರುವರು.

ಸಾರ್ವಜನಿಕ ಸಭೆಗಳು.

ಕರು–ಮೆ. ಆಲೆಮಾಡ ಪೊನ್ನಪ್ಪ
. ಒಮ್ಮತದಿಂದ ಪಾಸಾಯಿತು.
. 'ಸಿಬ್ಬಂದಿ ಖೋತೆಯ ನೆಪದಿಂದ
ಇರುವ ನಾಡು ಖಜೇರಿಗಳಲ್ಲಿ ಎ
ತೆಗೆಯಲು ನಿಶ್ಚಯಿಸಿರುವದನ್ನು
ಸಭೆಯು ಖಂಡಿಸುತ್ತದೆ ಮತ್ತು ರೈತ
ತದೃಷ್ಟಿಯಿಂದ ನಾಡು ಖಜೇರಿಗ
ದನ್ನೂ ತೆಗೆಯಬಾರದಾಗಿ ಈ ಸಭೆ
ಜೇಫ್ ಕಮಿಷನರನ್ನು ಕೇಳಿಕೊ
ದೆ.' ಸೂಚಕರು–ಮೆ. ಕೊಂಗಂಡ
ರ್ಯಪ್ಪನವರು. ಅನುಮೋದಕರು–
ಕಾಡ್ಯಮಾಡ ಗಣಪತ್ತಿಯವರು. ವಿ
ನವಿಲ್ಲದೆ ಮಂಜೂರಾಯಿತು.

6.'ವೀರಾಜಪೇಟೆ ಹುಡುಗಿಯರ ಶಾ
ಲೆಯನ್ನು ಮುಚ್ಚಲು ತೀರ್ಮಾನಿಸಿದ್ದು
ಖಂಡನೀಯವಾಗಿದೆ. ಹಾಗೆ ಮುಚ್ಚ
ಕೂಡದೆಂದು ಈ ಸಭೆಯು ಸರ್ಕಾರವ
ನ್ನು ಕೇಳಿಕೊಳ್ಳುತ್ತದೆ.' ಸೂಚಕರು:–
ಮೆ. ಕಡೇಮಾಡ ಪೂವಯ್ಯನವರು. ಅನು
ಮೋದಕರು:–ಮೆ. ಕೊಂಗಂಡ ಕಾರ್ಯ
ಪ್ಪನವರು. ಮೆ. ಗಳಾದ ಚೆಪ್ಪುಡೀರ ಬೆ
ಳ್ಯಪ್ಪನವರು ಮತ್ತು ಕೆ. ಸುಬ್ಬಯ್ಯನವರು
ವಿರೋಧಿಸಿ ಮಾತಾಡಿದರು. 4 ಜನರು
ಮಾತ್ರ ವಿರೋಧವಾಗಿಯೂ, ಉಳಿದವರೆ
ಲ್ಲರೂ ಪರವಾಗಿಯೂ ಓಟು ಮಾಡಿದ್ದ
ರಿಂದ ಠರಾವು ಬಹುಮತದಿಂದ ಪಾಸಾ
ಯಿತು.

7. 'ಕೊಡಗನ್ನು ದೊಡ್ಡ ಪ್ರಾಂತ್ಯಕ್ಕೆ
ಸೇರಿಸಬೇಕೆಂದು ಕೆಲವು ಮಹನೀಯರು
ದೇಶದವರ ಅಭಿಪ್ರಾಯವನ್ನು ಕೇಳದೇ
ನೇ ವೈಸರಾಯರಿಗೆ ಒಂದು ಮೆಮೋರಿಯ
ಲ್ ಕಳುಹಿಸಿರುವುದನ್ನು ಈ ಸಭೆಯು
ಖಂಡಿಸುತ್ತದೆ. ಆ ಮೆಮೋರಿಯಲ್‌ನ
ಲ್ಲಿ ಸೂಚಿಸಿರುವ ಅಭಿಪ್ರಾಯವು ದೇಶದ
ವರ ಅಭಿಪ್ರಾಯವಲ್ಲವೆಂದು ಈ ಸಭೆಯು
ದೃಢೀಕರಿಸುತ್ತದೆ.' ಸೂಚಕರು:–ಮೆ.
ಅಜ್ಜಿಕುಟ್ಟಿರ ಪೊನ್ನಪ್ಪನವರು. ಅನುಮೋ
ದಕರು:–ಮೆ. ಕಾಳೇಂಗಡ ಐಯ್ಯಪ್ಪನವ
ರು. ಠರಾವು ಬಹುಮತದಿಂದ ಪಾಸಾ
ಯಿತು.

ಹುದಿಕೇರಿ.

ಹುದಿಕೇರಿಯಲ್ಲಿ ಈ ತಾ. 2 ರಲ್ಲಿ
ನಡೆದ ಪಬ್ಲಿಕ್ ಮೀಟಿಂಗಿನಲ್ಲಿ ಮೆ. ಕ
ಳ್ಳಿಚಂಡ ಮುದ್ದಯ್ಯನವರು ಅಧ್ಯಕ್ಷರಾ
ಗಿದ್ದರು. ಮೀಟಿಂಗಿನ ಉದ್ದಿಶ್ಯವನ್ನು
ಕುರಿತು ಮೆ. ಕೊಳ್ಳಿಮಾಡ ಕರುಂಬಯ್ಯ
ನವರು ವಿವರಿಸಿದರು. ನಂತರ ಮೇಲೆ
(ಗೋಣಿಕೊಪ್ಪಲು ಮೀಟಿಂಗಿನಲ್ಲಿ) ಸೂ
ಚಿಸಿದ ಠರಾವುಗಳೇ ಇಲ್ಲಿಯೂ ಪಾಸಾ
ದವು.

1 ನೇ ಠರಾವು–ಸೂಚಕರು–ಮೆ. ಕೆ.
ಸಿ. ಕರುಂಬಯ್ಯನವರು; ಅನುಮೋದಕ
ರು–ಮೆ. ಹೊಟ್ಟೇಂಗಳ ಕುಶಾಲಪ್ಪನವ
ರು. ಸರ್ವ ಸಮ್ಮತದಿಂದ ಪಾಸಾಯಿತು.

2 ನೇ ಠರಾವನ್ನು ಮೆ. ಕಡೇಮಾಡ
ಸೋಮಯ್ಯನವರು ಸೂಚಿಸಿದನ್ನು ಮೆ.
ತಡಿಯಂಗಳ ತಿಮ್ಮಯ್ಯನವರು ಅನುಮೋ
ದಿಸಿದರು. ವಿರೋಧವಿಲ್ಲದೆ ಪಾಸಾ
ಯಿತು.

3 ನೇ ಠರಾವು—ಸೂಚಕರು—ಮೆ.
ಚೇಂದಿರ ಮುದ್ದಯ್ಯನವರು. ಅನು
ಮೋದಕರು–ಮೆ. ಚೋನಿರ ನಾಣಯ್ಯ
ನವರು. ಒಮ್ಮತದಿಂದ ಪಾಸಾಯಿತು.

4 ನೇ ಗೊತ್ತುಪಳಿಯನ್ನು ಮೆ. ಅ
ಜ್ಜಮಾಡ ಮೂವಪ್ಪನವರು ಸಭೆಯ ಮುಂ
ದಿಟ್ಟರು; ಮೆ. ನೂರೆರ ತಿಮ್ಮಯ್ಯನವರು
ಅನುಮೋದಿಸಿದರು. ಸರ್ವಸಮ್ಮತದಿಂದ
ಮಂಜೂರಾಯಿತು.

5 ನೇ ಠರಾವು–ಸೂಚಕರು—ಮೆ.
ತೀತಿರ ಗಣಪತ್ತಿಯವರು. ಅನುಮೋ
ದಕರು–ಮೆ. ಚೋಡುಮಾಡ ಬಿದ್ದಪ್ಪನ
ವರು ವಿರೋಧವಿಲ್ಲದೆ ಮಂಜೂರಾ
ಯಿತು.

6 ನೇ ಗೊತ್ತುವಳಿ–ಮೆ. ಕೆ. ಕೆ. ಗ
ಣಪತ್ತಿಯವರು ಸೂಚಿಸಿದನ್ನು ಮೆ. ಎ.
ಯಸ್. ಬೆಳ್ಯಪ್ಪನವರು ಅನುಮೋದಿಸ
ಲಾಗಿ ಠರಾವು ಪಾಸಾಯಿತು.

7 ನೇ ಠರಾವನ್ನು ಮೆ. ಮಲ್ಲಂಗಳ
ಸೋಮಯ್ಯನವರು ಸೂಚಿಸಿದರು; ಮೆ.
ಮುಂಡುಮಾಡ ದೇವಯ್ಯನವರು ಅನು
ಮೋದಿಸಿದರು. ಒಮ್ಮತದಿಂದ ಮಂಜೂ
ರಾಯಿತು.

ಬಲಮುರಿ.

ಈ ತಾ. 4 ರಲ್ಲಿ ಬಲಮುರಿ ಯೂನಿ
ಯನ್ ಕಟ್ಟಡದ ಮಹಡಿಯಲ್ಲಿ ನಡೆದ
ಸಾರ್ವಜನಿಕ ಸಭೆಗೆ ಜಮೀನ್ದಾರರ ಸಂ
ದ ಪ್ರೆಸಿಡೆಂಟರಾದ ಮೆ. ಬಿದ್ದಂಡ ಸುಬ್ಬ
ಯ್ಯನವರು ಅಧ್ಯಕ್ಷರಾಗಿದ್ದರು. ಮೆ.
ಪಿ. ಐ. ಬೆಳ್ಯಪ್ಪನವರು ಸಭೆ ಸೇರಿದ್ದರ
ಉದ್ದಿಶ್ಯವನ್ನು ವಿವರಿಸಿ ಹೇಳಿದರು. ರೆ
ವಿನ್ಯೂ ಮ್ಯಾನುವಲ್ಲಿನ ಕರಡು ತಿದ್ದುಪಡಿ
ಯ ಕುರಿತು ಅತೃಪ್ತಿ ಸೂಚಿಸಲಾಯಿತು.
ಸ್ಕೂಲ್ ಫೀಜು ಏರಿಸಕೂಡದೆಂದೂ, ನಾ
ಡು ಕಚೇರಿ ತೆಗೆಯ ಕೂಡದೆಂದೂ ಠರಾ
ವುಗಳು ಪಾಸಾದವು. ಕೊಡಗಿನ ಭವಿ
ಷ್ಯತ್ತನ್ನು ಕುರಿತು ವೈಸರಾಯರಿಗೆ ಕಳು
ಹಿಸಿರುವ ಮೆಮೋರಿಯಲಿನಲ್ಲಿ ಸೂಚಿಸಿ
ರುವ ಅಭಿಪ್ರಾಯವು ದೇಶದವರ ಅಭಿ
ಪ್ರಾಯವಲ್ಲವೆಂಬ ಗೊತ್ತುವಳಿಯು ಯಾ
ರ ವಿರೋಧವಿಲ್ಲದೆ ಮಂಜೂರಾಯಿತು.

—೦೦—

ಬಾಳೆಲೆ ಆಸ್ಪತ್ರೆ ಕಟ್ಟಡಕ್ಕೆ ಧನ ಸಹಾಯ ಮಾಡಿದವರು

ಮೆ. ಪಾರ್ವಂಗಳ ಚಂಗಪ್ಪನವರು ರೂ. 5, 1 ರೂಪಾಯಿಯಂತೆ ಮೆ. ಗಳಾದ ಪೈಕೇಡಮಾಡ ಸುಬ್ಬಯ್ಯನವರು, ಭೀ
ರಂಗುಟ್ಟಿ ಕಾಳನವರು, ಆದೇಂಗಳ ಪೂ
ವಯ್ಯನವರು, ತಿಮ್ಮಯ್ಯನವರು, ಮೇದ
ಪ್ಪನವರು, ಬೆಳ್ಯಪ್ಪನವರು, ಗಣಪತಿಯ
ವರು, ಅಡ್ಡಂಗಳ ಬಿದ್ದಪ್ಪನವರು, ಅರ
ಮಣಮಾಡ ಚಂಗಪ್ಪನವರು, ಪಾರ್ವಂಗಳ
ಯನ್ ಚಂಗಪ್ಪನವರು, ತಮ್ಮಯ್ಯನವ
ರು, ಕಾಂಡೇರ ಚಂಗಪ್ಪನವರು, ಕುಟ್ಟಪ್ಪ
ನವರು, ಪಂಚಮರ ಇದಿಯನವರು, ಪೋ
ಡಮಾಡ ಮಾದಯ್ಯನವರು, ಮಲಚೀರ
ಚಿಟ್ಟಯ್ಯನವರು, ಸುಬ್ಬಯ್ಯನವರು, ಬಿ.
ಚಿಟ್ಟಯ್ಯನವರು, ಸಿ. ಸುಬ್ಬಯ್ಯನವರು,
ಮುತ್ತಣ್ಣನವರು, ಕಾಟಮಾಡ ಪೂಚ
ಯ್ಯನವರು, ಒಕ್ಕಲಿಗರ ಚೆನ್ನಯ್ಯನವರು
ಕಾಂಡೇರ ಅಣ್ಣಯ್ಯನವರು, ಮೇಚಂಡ
ಪೆಮ್ಮಯ್ಯನವರು, ಊಬಿಯಂಡ ಗಣಪತಿ
ಯವರು, ಮಚ್ಚಮಾಡ ಚಂಗಪ್ಪನವರು,
ಮು. ಪಕ್ರುದ್ದೀನ್ ಸಾಬಿಯವರು, ಕಳ್ಳಿ
ಚಂಡ ಕುಟ್ಟಪ್ಪನವರು, ಬಿ. ಪೂಜಾರಿ
ಯವರೂ, ಮೆ. ಅಡ್ಡಂಗಳ ಗಣಪತಿಯ
ವರು ರೂ. 2-8-0, ಇತರ ಮಹನೀ
ಯರಿಂದ ರೂ. 9-10-0 ವಸೂಲಾಗಿದೆ.

ಧನ ಸಹಾಯ ಮಾಡುತ್ತೇವೆಂದು
ತಾ. 12-12-38ರಲ್ಲಿ ಆಸ್ಪತ್ರೆ ತೆರೆಯು
ವ ಸಮಾರಂಭದ ಸಭೆಯಲ್ಲಿ ವಾಗ್ದಾನ
ಮಾಡಿದ ಮಹನೀಯರ ಹೆಸರು.

ಮೆ. ಗಳಾದ ಪಾರ್ವಂಗಳ ತಿಮ್ಮಯ್ಯ
ನವರು ತಂದೆ ತಾಯಿಗಳ ಜ್ಞಾಪಕಾರ್ಥ
ವಾಗಿ ರೂ. 105, ಪಿ. ಟಿ. ಅಚ್ಚಯ್ಯನವ
ರು ರೂ. 100, ಆರಮಣಮಾಡ ಪೂವ
ಯ್ಯನವರು ರೂ. 51, ಮು. ಪಕ್ರುದ್ದೀ
ನ್ ಸಾಬಿಯವರು ತಮ್ಮ ಮಗ ಯಂ.
ಕಾಮಲ್ ಮುಸ್ತಫನವರ ಜ್ಞಾಪಕಾ
ರ್ಥವಾಗಿ ರೂ. 50, ಪೋಡಮಾಡ ಚಂಗ
ಪ್ಪನವರು ರೂ. 50, ಮಲಚೀರ ಮುತ್ತ
ಣ್ಣನವರು, ರೂ. 10, ಶಿ. ಸುಬ್ಬಯ್ಯನವ
ರು ರೂ. 10 ಕೊಡುವಂತೆಯೂ, ಮೆ.
ಗಳಾದ ಕಾಂಡೇರ ಸುಬ್ಬಯ್ಯನವರು, ಬ
ಲ್ಯಮಾಡ ನಂಜಪ್ಪನವರು, ಕ್ಕೊಕ್ಲೆಮಾಡ
ಕುಟ್ಟಪ್ಪನವರು, ಅಡ್ಡಂಗಳ ಪೊನ್ನಪ್ಪನ
ವರು, ತಾಣಚ್ಚೀರ ಬಿದ್ದಯ್ಯನವರು ಚೀ
ಯಕಪೂವಂಡ ಪೂವಯ್ಯನವರು, ಮು.
ಮಮ್ಮದ್ ಹುಸೇನ್ ಸಾಬಿಯವರು ಇವ
ರುಗಳು 5 ರೂಪಾಯಿಗಳಂತೆ ಕೊಡಲು
ಒಪ್ಪಿರುವರು.

ವರ್ಣಭೇದ!

ದಕ್ಷಿಣ ಆಫ್ರಿಕದಲ್ಲಿ ಬಿಳಿ-ಕರಿಯ
ವರ ಭೇದವು ಸಾಮಾನ್ಯವಲ್ಲ. ಟ್ರಾವಂ
ಕೂರ್ ರೈಲ್ವೆ ಕಂಪಾರ್ಟ್‌ಮೆಂಟುಗಳಲ್ಲಿ
ಬಿಳಿಯವರೊಂದಿಗೆ ಕರಿಯವರು ಪ್ರಯಾ
ಣ ಮಾಡಕ್ಕೂಡದು; ಯೂರೋಪಿಯನರ
ಹೊಟೆಲುಗಳಲ್ಲಿ ಹಿಂದೀಯರಿಗೆ ಪ್ರವೇಶ
ವಿಲ್ಲ; ಮಹಡಿಯ ಮೇಲಕ್ಕೆ ಹೊರುವವ
ನು ಬಿಳಿಯನಾದರೆ, ಅವನು ಅಲ್ಲಿನ ಏ
ಜೆಂಟ್ ಜನರಲರಾಗಿದ್ದ ಸರ್ ಸಯ್ಯದ್
ರಾಜಾ ಆಲಿ, ಆಥವಾ ಸೇಟ್ ಗೋವಿಂದ
ದಾಸ್ ಎಂ. ಎಲ್. ಎ. ಯಂತವರನ್ನೂ
ಹೊರಲಾರ; ಹಿಂದೀಯರು ಬಿಳಿ ಹುಡು
ಗಿಯರನ್ನು ತಮ್ಮ ಅಂಗಡಿಗಳಲ್ಲಿ ಕೆಲಸ
ಕ್ಕೆ ನೇಮಿಸಿಕೊಳ್ಳಲಾರರು; ಹಿಂದೀಯ
ರು ಯುರೋಪಿಯನರಿಗೆರೆದು ಕೊಡದಿಟ್ಟ
ಪ್ರದೇಶಗಳಲ್ಲಿ, ಭೂಮಿಯನ್ನು ಕೊಳ್ಳ
ಲಾರರು; ಯೂರೋಪಿಯನರಿಗೂ, ಆ
ಸ್ಯಾದವರಿಗೂ ಮದುವೆಯಾಗದಂತೆಯೂ
ನಿರ್ಬಂಧನೇರ್ಪಡುತ್ತಿದೆ–ಹೀಗೆ ವರ್ಣಭೇ
ದದ ಸಂಭ್ರಮವು ಅಲ್ಲಿ ಇಷ್ಟು ಮಟ್ಟಿಗೂ
ಇದಕ್ಕೂ ಹೆಚ್ಚಿಗೆಯಾಗಿಯೂ ಇರುವಾಗ
ಜರ್ಮನಿ, ಯೆಹೂದಿಗಳಿನ್ನು ವರ್ಣ ರ
ಕ್ತದ ಸಂಬಂಧವಾಗಿ ಹೀಗೆ ಪೀಡಿಸುತ್ತಿದೆ
ಎಂದು ಬಾಯಿ ಮಾಡಲು ಬ್ರಿಟಿಷರಿಗೆ
ಯಾವ ಹಕ್ಕು? ಅದಕ್ಕೂ, ಇದಕ್ಕೂ, ಆ
ಫ್ರಿಕಕ್ಕೂ, ಜರ್ಮನಿಗೂ ಈ ವರ್ಣ ಹಿಂ
ಸೆಯ ವಿಚಾರದಲ್ಲಿ ಏನು ವ್ಯತ್ಯಾಸವೆಂ
ದು ಅದೇ ಬ್ರಿಟಿಷರಾದರೂ ಯಾಕೆ ಹೇಳ
ರು? ನ್ಯಾಯಪ್ರತಿಪಾದನಕ್ಕೆ ಲಜ್ಜೆಯೂ
ಮೌನವೂ ಬೇಕೇ?

ವರ್ತಮಾನ ಸಂಗ್ರಹ.

ಒಳದೇಶ.

ಮೈಸೂರಿನ ಕೊಡವ ಸಂಘದವರು ತಾ. 18-12-38 ರಲ್ಲಿ ಹುತ್ರಿ ಹಬ್ಬವನ್ನು ಮೈಸೂರು ಸೌತಿನಲ್ಲಿ ಜರಗಿಸಿದರೆಂದು ತಿಳಿಸುತ್ತಾರೆ.

ಕೊಡಗು ಸೀಮೆಯಲ್ಲಿ ಕಳ್ಳತನವೂ ಡಿ ತಲೆ ತಪ್ಪಿಸಿಕೊಂಡು ಹಾಸನದಲ್ಲಿದ್ದ ಒಬ್ಬ ಅಪರಾಧಿಯನ್ನು ಕೊಡ್ಲಿಪೇಟೆ ಹೆಡ್‌ಕಾನ್ಸ್‌ಟೇಬಲ್ ಮೆ. ಸಿ. ಯಸ್. ದೇವಯ್ಯನವರು ಜಂಗಮನ ವೇಶವಿಂದ ಹೋಗಿ ಅಲ್ಲಿಯ ಮೈಸೂರು ಪೊಲೀಸರ ಸಹಾಯ ಪಡೆದು ದಸ್ತಗಿರಿ ಮಾಡುವದರಲ್ಲಿ ಯಶಶ್ವಿಯಾಗಿರುವರೆಂದು ತಿಳಿದು ಬರುತ್ತದೆ.

ಮಡಿಕೇರಿ.

ಇಲ್ಲಿ ಯಾಲಕ್ಕಿ ಮಣಕ್ಕೆ ರೂ. 35 ಕಾಫಿ ಖಂಡಿಗೆ ರೂ. 107 ಕ್ರಯವಿರುವದಾಗಿ ತಿಳಿಯುತ್ತೇವೆ.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 31-12-38 ರಲ್ಲಿ ಬ್ಯಾಂಕ್ ಆಫೀಸಿನಲ್ಲಿ ನಡೆಯುವದಾಗಿ ತಿಳಿಯುತ್ತೇವೆ.

ಈ ವಾರ ಇಲ್ಲಿ ಸ್ವಲ್ಪ ಸ್ವಲ್ಪ ಮಳೆ ಇತ್ತು, ಕುಯಿಲಿಗೆ ಪ್ರಾರಂಭಿಸಿರುವದರಿಂದ ಇದರಿಂದ ಸ್ವಲ್ಪ ತೊಂದರೆಯೂಗಿದೆ. ಈಗೆರಡು ದಿನಗಳಿಂದ ಮಳೆಯು ನಿಂತಂತೆ ಕಾಣುತ್ತದೆ.

'ಹೊಟೇಲ್ ಡಿ. ಕುರ್ಗ್' ಎಂಬ ಹೊಟೇಲನ್ನು 1-1-39 ರಲ್ಲು ಶ್ರೀ ಕೊಡಂದೇರ ಮಾದಪ್ಪನವರು ಪೋಸ್ಟಾಫೀಸು ಮುಂಭಾಗದಲ್ಲಿರುವ ಗೀತಾಂಜಲಿ ಬಂಗ್ಲೆಯಲ್ಲಿ ತೆರೆಯುವರಾಗಿ ತಿಳಿಸಿರುತ್ತಾರೆ.

ನಾಪೋಕ್ಲು.

ಇಲ್ಲಿಯ ದೊಡ್ಡಿಯಲ್ಲಿ ಪರಾರಿಯೊದ ಒಂದು ಕೋಣವನ್ನು ಸೇರಿಸಿರುವರೆಂದೂ, ಮಾಲೀಕರು ಬಂದು ತಕ್ಕ ರುಜುವಾತಿನಿಂದ ಪಡಕೊಳ್ಳಬೇಕೆಂದೂ ತಿಳಿಸುತ್ತಾರೆ.

ಶನಿವಾರಸಂತೆ.

ತಾರೀಕು 25-12-38 ರಲ್ಲಿ ಇಲ್ಲಿ ನಡೆದ ಮೀಟಿಂಗಿನಲ್ಲಿ ಕೊಡ್ಲಿಪೇಟೆಯಲ್ಲಿ ವಾರಕ್ಕೊಂದಾವರ್ತಿ ಆಸ್ಪತ್ರೆ ತೆರೆಯುವ ಸಮಾರಂಭನನ್ನು ಡಿ. ಬೋರ್ಡಿನ ಪ್ರೆಸಿಡೆಂಟರಾದ ಶ್ರೀ ಪಂದ್ಯಂಡ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿಸುವಂತೆ ತೀರ್ಮಾನವಾಗಿದೆ.

ಫ್ರೇಜರ್‌ಪೇಟೆ.

ಇಲ್ಲಿಯ ನೋಟಫೈಡ್ ಏರ್ಯದ ಪೈಸ ಪ್ರೆಸಿಡೆಂಟರಾದ ಶ್ರೀ ಯಂ. ಶ್ರೀನಿವಾಸವರ ಮೇಲೆ ತಾ. 15-7-38 ರ 'ಕೊಡಗು' ಪತ್ರಿಕೆಯಲ್ಲಿ ಶ್ರೀ. ಸಿ. ಮೇಡಕರವರು ಬರೆದು ಪ್ರಕಟಿಸಿದ ಬಾತ್ಮಿಯ ಮೇಲೆ ಅವರು ಮಾನನಷ್ಟದ ಮೊಕದಮ್ಮೆಯನ್ನು 1ನೇ ಕ್ಲಾಸ್ ಸಬಾರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ ಹೂಡಿರುವರಾಗಿ ತಿಳಿಯುತ್ತೇವೆ.

ಹಿಂದೂದೇಶ.

ಅಖಿಲ-ಹಿಂದೂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾದ ಮ. ಸುಭಾಸ್ ಚಂದ್ರ ಬೋಸ್‌ರವರು ಅಸ್ವಸ್ಥರಾಗಿದ್ದಾರೆ. ಅದಕ್ಕಾಗಿ ಅವರು ತಮ್ಮ ಕಾರ್ಯಕ್ರಮಗಳನ್ನೆಲ್ಲಾ ಮುಂದುವರಿಸಿರುವರು. ಈಗ ಅವರ ಪ್ರಕೃತಿಯು ಸುಧಾರಿಸುತ್ತಿದೆ.

ಮಹ್ಮದ್ ಶೌಕತ್ತಾಲಿಯವರ ನಿಧನದಿಂದ ಖಾಲಿಯಾದ ಕೇಂದ್ರ ಅಸ್ಸೆಂಬ್ಲಿಯ ಸದಸ್ಯತನಕ್ಕೆ ಹಿಂದೆ, ಹಿಂದೂಸ್ಥಾನದ ದಕ್ಷಿಣ ಆಫ್ರಿಕದ ಏಜಂಟರಾಗಿದ್ದ ಸರ್. ಸೈಯದ್ ರಾಜಾಅಲಿಯವರು ಅವಿರೋಧವಾಗಿ ಆರಿಸಲ್ಪಟ್ಟಿರುವರು.

ಸಂಯುಕ್ತ ಪ್ರಾಂತ್ಯದ ಸರಕಾರವು, ಮುಂದಿನ ಜನವರಿ 15 ನೇ ತಾರೀಕನ್ನು 'ಓಮುಬಹದ ದಸ್' (ಲಿಬ್ರೈಸೀ ಡೇ) ವಾಗಿ ಆಚರಿಸಲು ಯೋಚಿಸಿದೆ. ಸಂಸ್ಥಾನದ ಎಲ್ಲೆಡೆಗಳಲ್ಲೂ ನಡೆಯಲಿರುವ ಈ ಆಚರಣೆಯ ಕಾರ್ಯಕ್ರಮಗಳು ತಯಾರಾಗುತ್ತಿವೆ.

ಪಂಜಾಬ್ ಆಧಿಪತ್ಯದ ನಾಲಾ ಪ್ರದೇಶಗಳಲ್ಲಿ ವಿಶ್ವವಿದ್ಯಾನಿಲಯದ ಪ್ರೌಢ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಪ್ರಾಯಸ್ಥರು 9,000 ಏಕರೆಗಳಷ್ಟು ಜಮೀನುಗಳನ್ನು ಸರ್ಕಾರದ ಏರ್ಪಾಡಿನಂತೆ ಪಡೆದುಕೊಂಡು ಸಾಗುವಳಿ ಮಾಡುತ್ತಿದ್ದಾರೆಂದು ಪ್ರಕಟವಾಗಿದೆ.

ತಿರುವಾಂಕೂರು ಸಂಸ್ಥಾನದಲ್ಲಿ ಬೆಳೆಯುವ ಭತ್ತದ ಜಾತಿಗಳನ್ನು ಪರೀಕ್ಷೆ, ಪರಿಶೋಧನೆಗಳ ಮೂಲಕ ಉತ್ತಮಪಡಿಸಿ ಅವುಗಳ ಹುಲಸನ್ನು ಹೆಚ್ಚುವಂತೆ ಮಾಡುವುದಕ್ಕಾಗಿ ಇಂಡಿಯಾ ಸರ್ಕಾರದವರು ತಿರುವಾಂಕೂರು ಸರ್ಕಾರಕ್ಕೆ 29,920 ರೂಪಾಯಿ ಸಹಾಯಮಾಡಿರುತ್ತಾರೆ.

ಫೆಬ್ರವರಿಯಲ್ಲಿ ತ್ರಿಪುರಿಯಲ್ಲಿ ನಡೆಯುವ ಅಖಿಲ-ಹಿಂದೂಸ್ಥಾನದ ಕಾಂಗ್ರೆಸ್ಸಿನ 52 ನೇ ಮಹಾಧಿವೇಶನದ ಅಧ್ಯಕ್ಷರ ರಥವನ್ನು ಎಳೆಯಲು ಸುಂದರವಾಗಿ ಅಲಂಕೃತವಾದ 52 ಆನೆಗಳನ್ನು ಕಟ್ಟುವರೆಂದೂ, ಸಿರ್ಗೂಜ ಸಂಸ್ಥಾನದ ಮಹಾರಾಜರವರು ಈ ಆನೆಗಳನ್ನು ಕೊಡಲು ಒಪ್ಪಿರುವರೆಂದೂ ಹೇಳಲಾಗಿದೆ.

ವಕೀಲರ ವೃತ್ತಿಯಲ್ಲಿ ಅನೇಕ ತರದ ನ್ಯಾಯಬಾಹಿರವಾದ ವರ್ತನೆಗಳಿವೆಯೆಂದು ವಿಷಧೀಕೃತವಾದ ಪ್ರಯುಕ್ತ ಇನ್ನು ಮುಂದೆ ವಕೀಲರು ತಮ್ಮ ಲೆಕ್ಕ ಪತ್ರಗಳನ್ನು ಸರಿಯೊಗಿಡಬೇಕೆಂದೂ, ಆ ಬಗ್ಗೆ ಒಂದು ಮಸೂದೆಯು ಸರಕಾರದಿಂದ ತರಲ್ಪಡುವದೆಂದೂ, ಇವನ್ನು ಉಲ್ಲಂಘಿಸಿದವರು ಶಿಕ್ಷಿಸಲ್ಪಡುವರೆಂದೂ ತಿಳಿಯಬರುತ್ತದೆ.

ಜನವರಿ 7 ನೇ ತಾರೀಖಿಗೆ ಮುಂಬೈಯಲ್ಲಿ ಕೂಡಿಸಬೇಕೆಂದು ಮೂಡಿದ್ದ ಕಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯನ್ನು ಮುಂದೂಡಲಾಗಿದೆ. ಜನವರಿ 11 ನೇ ಅಥವ 12 ಕ್ಕೆ ಸಭೆ ಕರೆಯಬೇಕೆಂದು ದ್ಯಕ್ಕೆ ನಿಶ್ಚಯಿಸಲಾಗಿದೆ. ಈ ಮೀಟಿಂಗಲ್ಲಿ ಪ್ರಾಮುಖ್ಯವಾಗಿ ಕೋಮುವಾರು ಶ್ನೆಯು ಚರ್ಚಿಸಲ್ಪಡುವದೆಂದೂ, ಸ್ಲಿಂ ಲೀಗಿನವರು ಕಾಂಗ್ರೆಸನ್ನು ವಿರೋಸಿದ ಪ್ರತಿಯೊಂದು ವಿಷಯವೂ ಕೂ ಕುಶವಾಗಿ ವಿಚಾರಿಸಲ್ಪಡುವದೆಂದೂ ದುಬರುತ್ತದೆ.

ರಂಗೂನಿನಲ್ಲಿ ಸತ್ಯಾಗ್ರಹ ಚಳ ಆರಂಭವಾಗಿದೆ. ಸರಕಾರಕಾರವು ಳ್ಳೀ ಜೋರಿನಿಂದ ಚಳವಳಿಯನ್ನು ಬಡಿಯಲು ಲಾಠಿ ಗುಂಡುಗಳ ಪ್ರಯೋವನ್ನು ಮಾಡಹತ್ತಿದೆ. ಪಿಕೆಟಿಂಗ್ ವೆವಣಿಗೆ ಮುಂತಾದ ಕೆಲಸಗಳನ್ನು ಜನರು ರಭಸದಿಂದ ಸಾಗಿಸಿರುವರು. ಸೆಕ್ರೆಟರಿಯೆಟಿನಂಥ ಸರಕಾರಿ ಕಾಯದೆ ಗ್ರಹಗಳ ಮುಂದೆ ಪಿಕೆಟಿಂಗ್ ಮಾಡಹತ್ತಿದ್ದಾರೆ. ಈಗಿನ ಪರಿಸ್ಥಿತಿ ನೋಡಿದರೆ ಸತ್ಯಾಗ್ರಹ ಚಳವಳಿಯು ಇಡೀ ಬ್ರಹ್ಮದೇಶದಲ್ಲಿ ಪಸರಿಸುವದೆಂದು ತಿಳಿಯುತ್ತದೆ.

ಶಾಸನಭಂಗ ಚಳವಳಿಯ ಕಾಲದಲ್ಲಿ ವಶಪಡಿಸಿಕೊಂಡಿದ್ದ ಜಮೀನುಗಳನ್ನು ಹಿಂದಕ್ಕೆ ಕೊಟ್ಟು ಬಿಡಲಾಯಿತಷ್ಟೆ. ಆ ಜಮೀನುಗಳ ಪೈಕಿ ಒಂದನ್ನು ಉತ್ತು ಬಿತ್ತಿ ಫಸಲು ಪಡೆಯುವ ಸಲುವಾಗಿ, ಬಾರ್ದೋಲಿಯ ಜಮೀನುಗಳ ಮಾಲೀಕರು ಮಹಾತ್ಮ ಗಾಂಧಿಯವರನ್ನು ಆಹ್ವಾನಿಸಿ ಅವರಿಂದ ಹೊಲ ಊಳುವ ಸನಾರಂಭ ಕಾರ್ಯವನ್ನು ನೆರವೇರಿಸಲು ಯೋಚಿಸಿರುವರು. ಮಹಾತ್ಮರು ಬಾರ್ದೋಲಿಗೆ ಬಂದೊಡನೇ ಅವರನ್ನು ಪ್ರಾರ್ಥಿಸಿಕೊಳ್ಳಲಾಗುವದಂತೆ.

ವಿದೇಶ

ಕ್ರೈಸ್ತ ಧರ್ಮದ ಸರ್ವಶ್ರೇಷ್ಠ ಗುರುಗಳಾದ ಪೋಪರು, ಹಿಟ್ಲರನನ್ನು ಬಹಿಷ್ಕರಿಸಲು ಯೋಚಿಸಿದ್ದಾರೆಂದು.

ಬರ್ಮಾದಲ್ಲಿ, ಇದೀಗ ಪುನಃ ಗಲಭೆಯಾಗುವ ಸಂಭವವಿರುವುದರಿಂದ, 'ಎಮರ್ಜನ್ಸೀ ಲಾ' ರಂಗೂನಿನಲ್ಲಿ ಪಾಸುಮಾಡಲಾಗಿದೆ.

ಪೆಲೆಸ್ತೈನ್‌ನಲ್ಲಿ ಬ್ರಿಟಿಷ್ ಸೈನಿಕರು, ಅರಬರನ್ನು ಹಿಂಸಿಸುವ, ಅವರ ಮನೆಗಳನ್ನು ನಾಶಪಡಿಸುವ ವರ್ತನವು ಪುನಃ ಆರಂಭವಾಗಿದೆ. ಒಬ್ಬ ಅರಬನು ಮಡಿದ. ಒಬ್ಬ ಯೆಹೂದಿ ಗಾಯಗೊಂಡಿದ್ದಾನೆ. ಇದರಿಂದ ಅರಬರಲ್ಲಿ ಪುನಃ ಉದ್ವೇಗ ಉಂಟಾಗಿದೆ.

ಫ್ರೆಂಚ್ ಮಂತ್ರಿಗಳಾದ ಯಂ. ಬೊನ್ನೆಟ್ ಸಾಹೇಬರು ಟ್ಯೂನಿಸಿಯದಲ್ಲಿ ಒಂದಿಂಚು ಸ್ಥಳವನ್ನೂ ಇಟಲಿಗೆ ಕೊಡಲಾರೆವೆಂದು ಹೇಳಿದ್ದರಷ್ಟೆ. ಮುಸಲೋನಿಗಳ ಬಂಟರಾದ ಸೇನರ್ ಗೈಡಾರವರು ಅದಕ್ಕುತ್ತರವಾಗಿ 'ತೆಗೆದುಕೊಳ್ಳಲಾಗುತ್ತದೋ ಇಲ್ಲವೋ ನೋಡೋಣವಂತೆ' ಎಂದು ಬರೆದಿದ್ದಾರೆ.

ಮೋ
ಸರಕುಗ
ಬಂದಿಳಿಯುತ್ತ
ಸಾಗಿಸಲು ಆಗಲ್
ಏರ್ಪಾಡು ಮಾಡಿದ್ದ
ಅನೇಕ ಮೋಟಾರು ಡ್ರೈವ
ಮ್ಯಾಗ್ರಿಗಳನ್ನು ಜೈಲಾಕ್ಕೆ ಲಾರಿ
ಕೊಂಡುಹೋಗುತ್ತಿದ್ದರೆ.

—೦೦—

ಸರಕಾರದ ಪ್ರಕಟಣೆಗೆ ರಾಷ್ಟ್ರಪತ್ರಿಗಳ ಉತ್ತರ.

ರೂಪಾಯಿಯ ಬೆಲೆಯನ್ನು ಇಳಿಸುವ ವಿಷಯದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸ್ವೀಕಾರದ ಗೊತ್ತುವಳಿಗೆ ಉತ್ತರವೆಂದೋ ಏನೋ ಹಿಂದುಸ್ಥಾನ ಸರಕಾರವರು ಒಂದು ಪ್ರಕಟಣೆಯನ್ನು ಹೊರಡಿಸಿ ಸದ್ಯದ ವಿನಿಮಯ ದರವನ್ನು ಕಾಯ್ದುಕೊಳ್ಳಲು ಹಿಂದುಸ್ಥಾನ ಸರ್ಕಾರವು ಸರ್ವ ವಿಧದಲ್ಲಿಯೂ ಹೆಣಗುವದೆಂದು ತಿಳಿಸಿರುವರು.

ಹಿಂದುಸ್ಥಾನ ಸರ್ಕಾರದ ಪ್ರಕಟಣೆಯ ವಿಷಯದಲ್ಲಿ ರಾಷ್ಟ್ರಪತಿಗಳಾದ ಶ್ರೀ. ಸುಬಾಷಚಂದ್ರಬೋಸರು ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟ ಸ್ಪಂದರ್ಶನದಲ್ಲಿ ಹೀಗೆ ಹೇಳಿದರು.

'ಸರ್ಕಾರದ ಈ ಪ್ರಕಟಣೆಯಿಂದ ನಾವು ಚಿಂತಿಸುವ ಕಾರಣವಿಲ್ಲ. ಕಳೆದ ಕೆಲವು ವರ್ಷಗಳಲ್ಲಿ ಅನೇಕ 'ನಿಶ್ಚಿತ' ವಿಷಯಗಳು ಬುಡ ಮೇಲಾಗಿವೆ. ಅದರಿಂದ ಈ ವಿನಿಮಯವೂ ಅಲ್ಪಾವಧಿಯಲ್ಲಿಯೇ ಹಾರಿ ಹೋಗುವದು. ಹೋರಾಟವಾಗದೆ ಹಿಂದುಸ್ಥಾನ ಸರಕಾರವು ಬಗ್ಗುವದೆಂದು ನನಗೆ ತೋರುವದಿಲ್ಲ. ಸರ್ವಜನಿಕರ ಹಾಗೂ ಸಾರ್ವಜನಿಕ ಸಂಗಳ ಪರವಾಗಿಯೂ ನಾವು ಅವನ್ನು ಮರಿಸುವೆವು. ಹಾಗೂ ಈ ಕೇಂದ್ರೀಕೃತ ಶಕ್ತಿಯ ಮುಂದೆ ಹಿಂದುಸ್ಥಾನ ಸರಕಾರಕ್ಕೆ ತಲೆಬಾಗಿವ ಹೊರತು ಅನ್ಯ ಮಾರ್ಗವಿಲ್ಲ.'

—೦೦—

"ವಂದೇ ಮಾತರಂ"

"ಕೊಡಗು" ಲಿಮಿಟೆಡ್, ಕಂಪನಿ, ಮಡಿಕೇರಿ.

ಪ್ರಪಂಚದ ಆಗುಹೋಗುಗಳನ್ನು ತಿಳಿಯಲಪೇಕ್ಷಿಸುವಿರಾ? ಹಾಗಾದರೆ

'ಕೊಡಗು'

ವಾರ ಪತ್ರಿಕೆಯನ್ನು ಓದಿ.

ಉದಾತ್ತ ಲೇಖನ, ಕಥೆ, ಕವನ, ವಿಶ್ವ ವಿಚಾರಗಳಿಂದಲೂ ಹೆಚ್ಚೇಕೆ ಪಾಮರ ಗಣದ ಉದ್ಧಾರಕ್ಕಾಗಿ ಶ್ರಮಿಸುತ್ತಿರುವ ಪತ್ರಿಕೆಗೆ ಇಂದೇ ಚಂದಾದಾರರಾಗಿರಿ.

ವ್ಯಾಪಾರಸ್ಥರೇ,

ವ್ಯಾಪಾರದ ಆತ್ಮವೇ **ಜಾಹೀರಾತು.** ಪ್ರಪಂಚದ ಅಭಿವೃದ್ಧಿಯ ಆಡಿಗಲ್ಲೇ ವ್ಯಾಪಾರ. ಹೆಚ್ಚು ಲಾಭ ಬೇಕಾದರೆ

'ಕೊಡಗು'

ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಡಿ. ಆದ್ದರಿಂದ ಇಂದೇ ಜಾಹೀರಾತು ದರಗಳಿಗೆ ಬರೆಯಿರಿ.

ವಾರ್ಷಿಕ ಚಂದಾ: ರೂ. ೩—೮—೦.

೧೯೩೯ ನೇ ಕ್ಯಾಲೆಂಡರು. 1939

ದಿವಸಗಳು	ಜನವರಿ.	ಫೆಬ್ರವರಿ.	ಮಾರ್ಚ್.	ಏಪ್ರಿಲ್.	ಮೇ.	ಜೂನ್.	ಜುಲಾಯಿ.	ಅಗೊಸ್ತು.	ಸೆಪ್ಟೆಂಬರ್.	ಅಕ್ಟೋಬರ್.	ನವಂಬರ್.	ಡಿಸೆಂಬರ್.
ಆದಿತ್ಯವಾರ	1									1		
ಸೋಮವಾರ	2 ಜ. ಹೊಸವರುಷ.				1					2		
ಮಂಗಳವಾರ	3				2 ○ ಚಂದ್ರ ಗ್ರಹಣ.			1		3		
ಬುಧವಾರ	4	1 ಜ. ಬಕ್ರೀದ್	1		3 ಜ. ವಿಾಲಾದ ನಬಿ	1		2		4 ಪಷ್ಮಿ.	1	
ಗುರುವಾರ	5 ○	2	2 ಜ. ಮೊಹರಮ್ ಕಡೇ.		4			3		5	2	
ಶುಕ್ರವಾರ	6	3	3		5	2 ○		4	1	6	3 ಪಷ್ಮಿ.	1 ಕೊ. ಹುಣ್ಣಿ
ಶನಿವಾರ	7	4 ○	4	1	6	3	○ ಜ. ಅಧ ವಾರ್ಷಿಕ ಬ್ಯಾಂಕ್ ನ ರಜೆ.	5	2	7	4	2 ಜ. ಸುಬ್ರಹ್ಮಣ್ಯ ಪಷ್ಮಿ.
ಆದಿತ್ಯವಾರ	8	5	5 ○ ಹೊಳಿ ಹಬ್ಬ	2	7	4	1	6 ಪಷ್ಮಿ.	3 ಕೈಲ್‌ಮುಹೂರ್ತ.	8	5	3
ಸೋಮವಾರ	9	6	6	3	8	5	2	7	4	9	6	4
ಮಂಗಳವಾರ	10	7	7	4 ○	9 ಪಷ್ಮಿ.	6	3	8	5 ಪಷ್ಮಿ.	10	7	5
		8				7	4	9	6	11	8	6



ಪಾನ ನಿರೋಧ.

(ಲೇ| ಮಹಾತ್ಮ ಗಾಂಧಿ).

ಕಾಂಗ್ರೆಸ್ ಪ್ರಾಂತಗಳಲ್ಲಿನ ಪಾನ ನಿರೋಧವು ಊಹಿಸಿದಷ್ಟು ಭರದಿಂದ ನ ಡೆಯುತ್ತಿಲ್ಲ. ಆದು ಒಂದು ಪೇಳಿ ಮಂ ತ್ರಿಗಳ ತಪ್ಪಾಗಿರಲಿಕ್ಕಿಲ್ಲ. ಜನಮತವಾ ಗಲೀ, ಕಾಂಗ್ರೆಸಿನ ಮತವಾಗಲೀ ಮುತು ವರ್ಜಿಯಿಂದ ಪ್ರೋತ್ಸಾಹಿಸುತ್ತಿಲ್ಲ. ಪಾನನಿರೋಧವೆಂದರೆ ಮಿಲಿಯಂತರ ಜ ನರ ನಪಜೀವನವೆಂಬುದನ್ನು ಕಾಂಗ್ರೆಸಿನ ವರು ಅರಿತಂತೆ ಕಾಣುವದಿಲ್ಲ. ನ್ಯಾಯ ಸಮರ್ಪಕವಾದ ಪಾನ ನಿರೋಧವು ಕಾಂ ಗ್ರೆಸಿಗೆ ಗೌರವ ಮತ್ತು ಪ್ರತಿಷ್ಠೆಯನ್ನು ಕೊಡುವ ಪ್ರಮುಖ ದಾರಿಯೆಂಬುದನ್ನು ಮರೆತಿರಲಿಕ್ಕೇ ಬೇಕು. ಈ ಬಾಬಿನ ಕಂದಾಯದಿಂದ ಯಾವದೊಂದು ಸಾರ್ವ ಜನೋಪಯುಕ್ತ ಕಾರ್ಯ ಮಾಡಲು ತಾವು ತಯಾರಿಲ್ಲವೆಂಬುದನ್ನು ಜನತೆಗೆ ವಿಷದಪಡಿಸಿಲ್ಲ. ರಾಜಾಜಿಯವರಂತಹ ಪಾನ ನಿರೋಧಕರು ಸಹ ಅದರಿಂದ ಉ ತ್ಪತ್ತಿಯಾಗುತ್ತಿರುವ ಕಂದಾಯವನ್ನು ಪಾನ ನಿರೋಧ ಚಳವಳಕ್ಕಾಗಿ ಖರ್ಚು ಮಾಡುವಂತಹ ಯೋಜನೆಯನ್ನು ಮಾಡಿ ಲ್ಲ. ಕುಡಿತದ ದಾಸರಾಗಿ ನಾವು ಸ್ವಾ ತಂತ್ರ್ಯ ಸಂಪಾದಿಸಿದರೂ ಅದು ಯತಾ ರ್ಥವಾದ ಸ್ವಾತಂತ್ರ್ಯವೆನ್ನಿಸುವುದಿಲ್ಲ.

ಮಂತ್ರಿಗಳು ಪಾನ ನಿರೋಧ ಕಾರ್ಯಕ್ರಮಗಳನ್ನು ಸಮಂಜಸವಾದ ರೀತಿಯಿಂದ ಮಾಡುತ್ತಿರುವರು. ಅವರು ಹಣದ ಅಭಾವದ ವಿಚಾರ ಯೋಜನೆಗೀ ಡಾಗಿರುವರು. ಅವರೆ ಇಂದೇ ಪಾನೀ ಯದಾಸರೆಲ್ಲ ಪಾನನಿರೋಧವನ್ನು ಕೈ ಕೊಂಡರೆ ಹಣಕ್ಕೆ ಅವರೇನು ಮಾಡುವರೆಂ ದು ನನಗಾಶ್ಚರ್ಯವಾಗುತ್ತಿದೆ. ಅವ ರು ಹೇಗಾದರೂ ಸರಿಪಡಿಸ್ಯಾರು ಎಂದು ಹೇಳಬಹುದು. ಆದರೆ ಆದೇ ಪ್ರಯತ್ನ ವನ್ನು ಈಗ ಮಾಡಲಿಕ್ಕಾಗುವುದಿಲ್ಲವೇ ನು? ನಿಜವಾಗಿಯೂ ಅತ್ಯಗತ್ಯವಾದ ಇಂಥಾ ಕಾರ್ಯಕ್ರಮಗಳನ್ನು ಬಲತ್ಕಾರ ದಲ್ಲಿ ನಿರ್ವಾಹವಿಲ್ಲದೆ ಮಾಡುವದಕ್ಕಿಂತ ಅದೊಂದು ಮಾಡತಕ್ಕ ಕಾರ್ಯವೆಂದೇ ಮಾಡುವದರಲ್ಲಿ ಗೌರವವಿದೆ. ಬಿಹಾ ರ್ ಸರ್ಕಾರದ ಆದಾಯವೆಲ್ಲವೂ ಭೂ ಕಂಪದಿಂದಾಗಿ ನುಂಗಲ್ಪಟ್ಟಾಗ ಸರ್ಕಾರ ವು ನಿಂತುಹೋಗಲಿಲ್ಲ. ಭಾರತದಲ್ಲಿನ ಸರ ಕಾರಗಳೆಲ್ಲಾ ತಮ್ಮ ಪ್ರಾಂತಗಳು ಬರಗಾ ಲ ಅಥವಾ ನೊರೆ ಹಾವಳಿಯಿಂದ ನಷ್ಟ ವಾಗಿ ಕಂದಾಯವು ಕಡಿಮೆಯಾಗುವ ಸಂ ದರ್ಭಗಳಲ್ಲಿ ಏನು ಮಾಡುತ್ತವೆ. ಆದ ರಿಂದ ಆರ್ಥಿಕ ಲಾಭದ ದೃಷ್ಟಿಯಿಂದ ಪಾನನಿರೋಧವನ್ನು ನಿಧಾನಿಸಿದ್ದೇ ಆದರೆ ಕಾಂಗ್ರೆಸ್ ಮಂತ್ರಿಗಳು ತಮ್ಮ ಪತ್ರ ಪ್ರ ತಿಜ್ಞೆಗಳನ್ನು ಮುರಿದಂತಾಗುವುದು.

• ಅವರು ಜೇರೆ ಹೊಸ ವಿಧಾನಗಳಿಂದ ನ್ಯಾಯವಾದ ರೀತಿಯ ಹೊಸ ತೆರಿಗೆಗ ಳಿಂದ ಹಣ ಸಂಗ್ರಹಿಸುವ ಏರ್ಪಾಡು ಮಾಡಬೇಕು. ಪಾನೀಯದ ಹುಚ್ಚು ಪ ಟ್ಟಣಗಳಲ್ಲಿ ಹೆಚ್ಚಾಗಿರುವುದು. ಈ ಭಾಗ ಗಳಲ್ಲೇ ಹೊಸ ತೆರಿಗೆಯನ್ನು ಹಾಕಲು ಅಸ್ಪದವಿರುವುದು. ಪಾನನಿರೋಧವು

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ
ಕೊಡಗಿನವರ ಡೆಪ್ಯುಟೇಶನ್.
ಶ್ರೀ. ಐ. ಪಿ. ಕಾರ್ಯಪ್ಪನವರ ಪ್ರಕಟಣೆ ವಿಷಯ ಎರಡು ಮಾತು.

ಕೊ. ಜಿ. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಐ. ಪಿ ಕಾರ್ಯಪ್ಪನವರು ತಾ. 23-12-38 ರ 'ಕೊಡಗು' ಪತ್ರಿಕೆಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ಬಂ ದ ಪತ್ರದ ವಿಷಯ ನನ್ನ ಮೇಲೆ ಹೊರಿಸಿ ರುವ ಆರೋಪಣೆಗಳನ್ನು ಕುರಿತು ನಡೆದ ನಿಜಸಂಗತಿಗಳನ್ನು ಬರೆಯಬೇಕಾಗಿದೆ.

ತಾ. 6-10-38 ರಲ್ಲಿ ಜೆಲ್ಲಿಯಿಂದ ಶ್ರೀ ಜೆ. ಬಿ. ಕೃಪಾಲಿನಿಯವರು ಬರೆದ ಪತ್ರ ತಾ. 11-10-38 ರಲ್ಲು ನನಗೆ ಸಿ ಕ್ಕಿತು. ಮಾಮೂಲಿನಂತೆ ಆ ಪತ್ರವನ್ನು ನಾನು ನನ್ನ ಆಫೀಸು ಫೈಲಿನಲ್ಲಿಟ್ಟಿನು. ಈ ವರೆಗೆ ಬಂದ ಪತ್ರವ್ಯವಹಾರಗಳನ್ನು ಈ ರೀತಿ ಇಟ್ಟು ಅಧ್ಯಕ್ಷರು ಮಡಿಕೇರಿಗೆ ಬರುವಾಗ್ಗೆ ಯೂ, ಜಿ. ಕಾ. ಕ. ಮಿಟಿಂಗು ನಡೆಯುವಾಗ್ಗೆ ಅವರಿಗೆ ತೋರಿಸುವದಾ ಗಿತ್ತು. ಅದೇ ತಿಂಗಳು ತಾ. 25-10-38 ರಲ್ಲಿ ಅಧ್ಯಕ್ಷರಾದ ಶ್ರೀ ಐ. ಪಿ. ಕಾ ರ್ಯಪ್ಪನವರು ಕೌನ್ಸಿಲ್ ಮಿಟಿಂಗಿಗಾ ಗಿ ಮಡಿಕೇರಿಗೆ ಬಂದಿದ್ದರು. ಆ ಪತ್ರ ತಲಪಿದ ಮೇಲೆ ಅದೇ ಪ್ರಥಮತಃ ನಾನು ಅವರನ್ನು ಮಡಿಕೇರಿಯಲ್ಲಿ ಕಂಡದ್ದು. ಅವರೂ ಶ್ರೀ ಕೆ. ಯಂ. ದೇವಯ್ಯ (ಯಂ. ಯಲ್. ಸಿ.) ನವರು ಬೊಂಬಾ ಯಿ ರೆಸ್ಟೋರೆಂಟಿನಲ್ಲಿದ್ದರು. ಅಲ್ಲಿ ಅವ ರನ್ನು ಕಂಡಾಗ್ಗೆ ಅವರು ನನ್ನಿಂದ ಸ್ವಲ್ಪ ಕೆಲಸ ಆಗಬೇಕೆಂದು ಹೇಳಿದರು. 'ಆಗ ಲಿ ನನ್ನ ಆಫೀಸಿಗೆ ಹೋಗುವಾ' ಎಂದು ನಾನು ಅವರನ್ನು ನನ್ನ ಪ್ರೈಸ್ಗೆ ಕರೆದು ಕೊಂಡು ಬಂದು ಮೊದಲಾಗಿ ಕಾಂಗ್ರೆಸ್ ಪತ್ರವ್ಯವಹಾರದ ಫೈಲನ್ನು ನೋಡಬೇ ಕೆಂದು ಹೇಳಿ ಫೈಲನ್ನು ಬಿಚ್ಚಿ ಅವರ ಮುಂದಿಟ್ಟಿನು. ಅವರು ಅದನ್ನು ಕಣ್ಣಿ ತ್ತಿ ಸಹ ನೋಡದೆ 'ಅದರಲಿ ನನಗೆ ನಾಳೆ ದಿನದ ಕೌನ್ಸಿಲು ಮಿಟಿಂಗಿಗೆ ಭಾಷಣಗ ಳನ್ನು ಬರೆದು ಕೊಡು' ಎಂದು ಹೇಳಿ ನ ಮ್ಮ ಭಾಷಣ ಬರೆಸಿಕೊಳ್ಳುವದರ ಕಡೆಗೆ ಅತ್ಯಾತುರತೆಯನ್ನು ತೋರಿಸಿ, ಕಾಂಗ್ರೆಸಿ ನ ಪತ್ರವ್ಯವಹಾರಗಳ ಕಡೆಗೆ ಏನೊಂದೂ ನಿಗಕೊಡಲಿಲ್ಲ. ಅನಂರು ಆ ಸಮಯ ನನ್ನ ಆಫೀಸಿನಲ್ಲಿ 1½ ತಾಸಿನ ಮಟ್ಟಿಗೆ ಉಳಿದಿದ್ದರು. ಜಿಲ್ಲಾ ಕಾಂಗ್ರೆಸಿನ ಆಧ್ಯ ಕ್ಷರಾಗಿರುವವರು ಏನೇ ಇರಲಿ, ಮುಂದಿ ಟ್ಟ ಪತ್ರವ್ಯವಹಾರಗಳನ್ನಾದರೂ ನೋಡ ದೆ ಅವರ ಬದಲು ತಮ್ಮ ಬೇರೆ ಕೆಲಸಗಳ ನ್ನು ಸಾಧಿಸಿಕೊಂಡು ಕೊನೆಗೆ ನಾನು ಆ ಪತ್ರವನ್ನು ಗುಟ್ಟಿನಲ್ಲಿಟ್ಟಿದ್ದೆನೆಂಬದಕ್ಕೆ ಬ ಹಳ ವಿಷಾದಪಡುತ್ತೇನೆ. ಈಗ ಬೇಕಾ ದರೆ 'ವರ್ಕಿಂಗ್ ಕಮಿಟಿಯ ಪತ್ರ ಬಂದ ದ್ದೆಂದು ಹೇಳಿದ್ದರೆ ನೋಡುತ್ತಿದ್ದೆ' ಎಂದು ಮಾತು ಹೊರಳಿಸಿಯಾರು. ಆದರೆ ಒಂ ದು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಬರೇ ಒಂದು ವರ್ಕಿಂಗ್ ಕಮಿಟಿಯ ಪತ್ರ ಬಂದಿದ್ದರೆ ಮಾತ್ರ ನೋಡಲಿಕ್ಕಿರುವದಲ್ಲ. ಕಾಂಗ್ರೆಸ್ ಕಛೇರಿಗೆ ಬಂದ ಎಲ್ಲಾ ಪತ್ರ ವ್ಯವಹಾರಗಳನ್ನು ನೋಡಿ ಕಾರ್ಯ ಹೂ ಡಬೇಕಾಗಿದೆ. ಈ ರೀತಿ ತಮ್ಮ ಪಾಲಿನ ಕರ್ತವ್ಯ ಮಾಡದೆ ಇತರರ ಕರ್ತವ್ಯದ ಕ ಡೆಗೆ ಇಷ್ಟೊಂದು ದಕ್ಷತೆ ತೋರಿದ್ದು ಅ ಪ್ರಾಕೃತವಾಗದೇ? ಈ ರೀತಿ ನಾನು ಅವ ರ ಮುಂದೆ ಪತ್ರದ ಫೈಲನ್ನು ಇಟ್ಟಿದ್ದರೂ ಅವರಿಗೆ ಪತ್ರ ತೋರಿಸಲಿಲ್ಲ ಎಂದು ಪ್ರಕ ಟಿಸಿದ್ದಕ್ಕೆ ಬಹಳ ವಿಷಾದ ಪಡಬೇಕಾಗಿದೆ.

ಬೇರೆ ಎಷ್ಟು ಮಂದಿ ನನ್ನಲ್ಲಿ ಈ ಪ ತ್ರದ ವಿಚಾರ ಪ್ರಸ್ತಾಪ ಮಾಡುವಾಗ ನಾನು ಪತ್ರ ಅಡಗಿಸಿ ಮಾತಾಡಿರುವೆನೆಂ ಬಮೆ ನನಗೇನೂ ತಿಳಿಯದು. ಯಾರೂ ಈ ವಿಷಯ ಬಂದು ನನ್ನಲ್ಲಿ ವಿಚಾರ ಮಾ ಡಿರುವದಿಲ್ಲ. ಈ ವರೆಗೆ ಯಾರೂ ಬಂ ದು ಆ ವಿಚಾರ ನನ್ನಲ್ಲಿ ಪ್ರಸ್ತಾಪ ಮಾಡ ದೆ ನಾನು ಇತರರಿಂದಲೂ ಪತ್ರ ಬಚ್ಚಿಟ್ಟ ದೆಂಬವನ್ನು ಹೇಗೆ ಇವರು ಅರಿತರೋ ನ ನಗೆ ತಿಳಿಯದು. ಬಹುಶಃ ಕಾಂಗ್ರೆಸ್ ಸೆಕ್ರೆಟರಿಯ ಹಸ್ತದಿಂದ ವಿಚಾರ ತಿಳಿದು ಕೊಳ್ಳುವದು ಕೆಲವರಿಗೆ ದುಸ್ಸಹವಾಗಿರಬ ಹುದೇ? ಹಾಗಾಗಿದ್ದರೆ ಅದು ನನ್ನ ತ ಪ್ಪೇ? ಪತ್ರದ ವಿಚಾರವಾಗಿ ಅ. ಭಾ. ಕಾ. ಕಮಿಟಿಗೆ ಪತ್ರ ಬರೆದವರಿಗೆ ಮುಂ ಕೇರಿಯಲ್ಲಿರುವ ನನ್ನನ್ನು ಒಂದು ಮಾತು ಕೇಳುವದು ಅಸಾಧ್ಯವಾಗಿತ್ತೇನು? ಈ ರೀತಿ ಯಾರೂ ನನ್ನಲ್ಲಿ ಬಂದು ಈ ವಿಚಾ ರ ಪ್ರಸ್ತಾಪ ಮಾಡದಿರುವಾಗ್ಯೆ ನಾನು ಪ ತ್ರ ಗುಟ್ಟಿನಲ್ಲಿಟ್ಟಿನೆಂಬದಕ್ಕೆ ಬಹಳ ವಿಷಾ ದಪಡಬೇಕಾಗಿದೆ.

ಅದಿರಲಿ, ಅಪಪ್ರಚಾರ ನಡೆಯುತ್ತಿ ತ್ತೆಂದು ಅಧ್ಯಕ್ಷರ ಹೇಳಿಕೆ. ಹಾಗಿದ್ದಲ್ಲಿ ತಾ. 15-10-38 ರಲ್ಲು ತಾವೇ ಬರೆದ ಪತ್ರಕ್ಕೆ ಜವಾಬು ದೊರೆತೊಡನೆ ಅವನ್ನು ಯಾತಕ್ಕೆ ಅಧ್ಯಕ್ಷರೇ ಬಹಿರಂಗಪಡಿಸಲಿ ಲ್ಲ. ಹಾಗಾದರೆ ನನ್ನ ಮೇಲೆ ತಪ್ಪು ಹೊರಿಸಲಿಕ್ಕಾಗಿ ಮಾತ್ರ ಈ ಅಪಪ್ರಚಾರ ಗಳು ಅಧ್ಯಕ್ಷರ ದೃಷ್ಟಿಗೆ ಬಿದ್ದಿರಬಹು ದೇ? ಅಪಪ್ರಚಾರ ನಡೆಯುತ್ತಿದ್ದದು ನಿ ಜವಾಗಿದ್ದರೆ ಅಧ್ಯಕ್ಷರು ಪತ್ರ ತಮ್ಮಕೈಗೆ ತಲಪಿದಾಕ್ಷಣ ಬಹಿರಂಗಪಡಿಸದಿರಲು ಕಾರಣವೇನಿರಬಹುದು?

ಆ ಪತ್ರ ನನಗೆ ರುಚಿಸದ ಕಾರಣ ನಾನು ಅದನ್ನು ಪ್ರಚುರಗೊಳಿಸಲಿಲ್ಲವೆಂ ದು ಅಧ್ಯಕ್ಷರು ಅಪ್ಪಣೆ ಕೊಟ್ಟಿದ್ದಾರೆ. ಆ ದು ಯಾರಿಗೆ ರುಚಿಸದ್ದು? ಕಾಂಗ್ರೆಸಿನವ ರು ಸದ್ಯಕ್ಕೆ ಪತ್ಯೇಕ ಪ್ರಾಂತಕ್ಕಾಗಿಯೋಗ ಲೀ, 1935 ನೇ ಸುಧಾರಣೆಗಳನ್ನು ಪಡೆ ಯಲಿಕ್ಕಾಗಿಯೋಗಲೀ ಚಳವಳಿ ಹೂಡಬಾ ರದೆಂದು ಸೂಚಿಸಿದ್ದು ಯಾರಿಗೆ ರುಚಿಸಲಿ ಲ್ಲ? ಅದಕ್ಕಾಗಿ ಈಗ ಜಮೀನ್ದಾರ ಸಂಘ ದ ಆಶ್ರಯದಲ್ಲಿ ಕೊಡಗು ಪ್ರತ್ಯೇಕವಾಗಿ ರಬೇಕೆಂಬ ಚಳವಳ ಕೆಲವು ಕಾಂಗ್ರೆಸಿನವ ರಿಂದ (ನನ್ನ ಅಧ್ಯಕ್ಷರು ಸಹಿ) ನಡೆ ಯುತ್ತಲಿದೆಯಲ್ಲ ಇದು ಏತಕ್ಕಾಗಿ? ಕಾಂಗ್ರೆಸ್ ಬಾಯಿ ಕಟ್ಟಿದ್ದರಿಂದ ಜಮೀ ನ್ದಾರ ಸಂಘದ ಇನ್ನೊಂದು ಬಾಯಿಯಲ್ಲಿ ಈಗ ಸ್ವರ ಹೊರಡುತ್ತಿದಲ್ಲಾ ಇದು ಯಾ ವ ಕಾರಣದಿಂದ? ಈಗ ಪತ್ರ ಯಾರಿಗೆ ರು ಚಿ? ನಿಮ್ಮ ಅಧ್ಯಕ್ಷರಾದ ಶ್ರೀ ಐ. ಪಿ. ಕಾರ್ಯಪ್ಪನವರು ಜಮೀನ್ದಾರ ಸಂಘದ ಸೆಕ್ರೆಟರಿ ತನಕ್ಕೆ ರಾಜೀನಾಮೆಯಿತ್ತದ್ದೂ ಈ ಪತ್ರದ ಪ್ರಭಾವವೆಂದು ಊಹಿಸಬಹು ದಲ್ಲವೇ? ಪತ್ರದಲ್ಲಿ ಮದ್ರಾಸು ಮತ್ತು ಕ ರ್ನಾಟ ಪ್ರಾಂತೀಕರಣಕ್ಕೆ ಪ್ರತಿ ಬಂಧಕ ವನ್ನಿಡದೆ ಪ್ರತ್ಯೇಕ ಪ್ರಾಂತಕ್ಕೆ ಕಾಂಗ್ರೆಸಿ ನವರು ಈಗ ಸದ್ಯಕ್ಕೆ ಚಳವಳಿ ಮಾಡಬಾ ರದೆಂದನ್ನು ಯಾರಿಗೆ ರುಚಿಸದ್ದು? ಪಾಪ ಕರು ಊಹಿಸಿಕೊಳ್ಳಬೇಕಾಗಿದೆ.

ಈ ವಿಚಾರಗಳನ್ನು ಪ್ರಕಟಿಸುವದಕ್ಕೆ ನನಗೇನೂ ಹರ್ಷವೆನಿಸುವದಿಲ್ಲ, ಆದರೆ ಜಿ. ಕಾ. ಕ. ಅಧ್ಯಕ್ಷರಂತವರೇ ನಿಜಸಂ ಗತಿಗಳನ್ನು ಪ್ರಕಟಿಸದಿದ್ದದಕ್ಕೆ ನನ್ನ ಮ ಟ್ಟಿಗೆ ಈ ಪ್ರಕಟಣೆ ಹೊರಡಿಸಿದ್ದಾಗಿದೆ.

ಸಿ. ಯಂ. ಪೂಣಚ್ಚ.

ವಕೀಲರು ಹಳ್ಳಿಗಳಿಗೆ ಹೋಗಬೇಕು.

ಅವರ ನಿರುದ್ಯೋಗವನ್ನು ಕಮ್ಮಿ ಮಾಡಲು

ಇದೊಂದೇ ಮಾರ್ಗವು.

ಸರ್ ಯಂ. ವೆಂಕಟಸುಬ್ಬರಾಯರ ವಿಚಾರಗಳು.

ಮದ್ರಾಸು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಸರ್ ಎಂ. ವೆಂಕಟ ಸುಬ್ಬರಾಯರು ದಕ್ಷಿಣ ಕೃಷ್ಣಾ ಜಿಲ್ಲೆಯ ವಕೀಲರ ಪರಿಷತ್ತಿನಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ:–

ಅವರು ತಮ್ಮ ಭಾಷಣದಲ್ಲಿ ವಕೀಲಿ ವೃತ್ತಿಯ ಮಹತ್ವ, ಅದರ ರಹಸ್ಯ ಮತ್ತು ಅವರ ಸದುಪಯೋಗವನ್ನು ಹೇಗೆ ಮಾಡಿಕೊಳ್ಳಬೇಕು ಮುಂತಾದುದನ್ನು ತಿಳಿಸಿ ಬಳಿಕ ವಕೀಲರ ಸಂಖ್ಯೆಯು ದಿನ ದಿನಕ್ಕೆ ಹೆಚ್ಚುತ್ತಿರುವದನ್ನು ಉಲ್ಲೇಖಿಸಿದರು.

'ಈ ಸಮಸ್ಯೆಯು ಈಗ ಬಹಳ ಬಿಗಿಯಾಗಿರುವದರಿಂದ ನಾವು ಅಲಕ್ಷ್ಯ ಮಾಡುವಂತಿಲ್ಲ. ವಕೀಲರ ಸಂಖ್ಯೆಯು ವಿಶೇಷವಾಗಿ ಬೆಳೆದಿರುವದರಿಂದ, ವಕೀಲಿ ವೃತ್ತಿಯ ಪ್ರಗತಿಯು ಕಡಮೆಯಾಗುತ್ತಿರುವದಲ್ಲದೆ, ವೃತ್ತಿಯ ಸದ್ಗುಣಗಳೂ ಮಾಯವಾಗುವ ಹೊತ್ತು ಬಂದಿದೆ. ಈ ರೀತಿ ವಕೀಲರ ಸಂಖ್ಯೆಯು ವಿಪರೀತ ಬೆಳೆಯಲು ಕಾರಣವೇನು? ಪ್ರಾಥಮಿಕ ಶಿಕ್ಷಣದ ಪ್ರಸಾರ ಮತ್ತು ಹೊಸ ಕಾಲದ ಹೊಸ ವಿಚಾರಗಳ ಉದಯವೇ ಇದಕ್ಕೆ ಕಾರಣವೆಂದು ಹೇಳಬಹುದು. ಕಾರಣವು ಏನೇ ಇರಲಿ, ವಕೀಲರು ಅವಶ್ಯವಿರುವದಕ್ಕಿಂತ ಹೆಚ್ಚಾಗಿರುವರೆಂಬುದು ಮಾತ್ರ ನಿಜವು. ಆದ್ದರಿಂದ ನಾವು ಸದ್ಯಕ್ಕೆ ವಕೀಲಿ ವೃತ್ತಿಯಲ್ಲಿ ಬೆಳೆದಿರುವ ನಿರುದ್ಯೋಗವನ್ನು ನಿವಾರಿಸಲು ಏನು ಮಾಡಬೇಕೆಂಬುದನ್ನು ವಿಚಾರಿಸಬೇಕು.

ಹಳ್ಳಿಗಳಿಗೆ ಹೋಗಬೇಕು.

'ವಕೀಲರ ವೃತ್ತಿಯ ನಿರುದ್ಯೋಗವನ್ನು ನಿವಾರಿಸಲು ಅನೇಕ ಮಾರ್ಗಗಳಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ನಾವು ವಿಚಾರಿಸೋಣ. ಕೇವಲ ಕೋರ್ಟಿನ ಕೆಲಸವೇ ತಮ್ಮ ಉದ್ಯೋಗವೆಂದು ವಕೀಲರು ತಿಳಿಯುತ್ತಾರೆ, ಇದು ತಪ್ಪು. ವಕೀಲರ ಕೆಲಸಗಳೇನು, ತಮ್ಮ ಕಷ್ಟ ನಷ್ಟಗಳನ್ನು ನಿವಾರಿಸಲು ಅವರು ಹೇಗೆ ಸಹಾಯ ಮಾಡಬಲ್ಲರು ಎಂಬದು ಹಳ್ಳಿಯವರಿಗೆ ಗೊತ್ತಿರುವುದಿಲ್ಲ. ಸಾಮಾನ್ಯವಾಗಿ ಕೋರ್ಟಿನಲ್ಲಿ ನಡೆಯುವ ಖಟ್ಲೆ ತಕರಾರುಗಳೆಲ್ಲವೂ ಹಳ್ಳಿಯವರಿಗೇ ಸಂಬಂಧಪಟ್ಟಿರುತ್ತವೆ. ನಿಜವಾಗಿ ಪ್ರಯತ್ನಪಟ್ಟರೆ ಈ ಖಟ್ಲೆ ತಕರಾರುಗಳು ಕೋರ್ಟಿಗೇ ಬರದಂತೆ ಮಾಡಲು ಸಾಧ್ಯವಿರುತ್ತದೆ. ಹಳ್ಳಿಗಳಿಗೆ ಹೋಗಿ ನೆಲಸಲು ವಕೀಲರಿಗೆ ಇಷ್ಟ ಇಲ್ಲ. ಆದರೆ ವಕೀಲರಲ್ಲಿ ಜೆಳೆದಿರುವ ನಿರುದ್ಯೋಗವು ನಿವಾರಣೆಯಾಗಿ ಎಲ್ಲ ರೀತಿಯಿಂದ ಎಲ್ಲರಿಗೂ ಅನುಕೂಲವಾಗಬೇಕಾದರೆ ವಕೀಲರು ಹಳ್ಳಿಗಳಿಗೆ ಹೋಗಲೇ ಬೇಕು. ಪಟ್ಟಣಗಳಲ್ಲಿ ವಕೀಲರ ಸಂಖ್ಯೆ ಮಿತಿಮೀರಿ ಬೆಳೆದಿದೆ. ಹಳ್ಳಿಗಳಲ್ಲಿ ಅವರು ಮಾಡಬೇಕಾದ ಕೆಲಸಗಳು ವಿಶೇಷವಾಗಿವೆ. ಅವನ್ನೆಲ್ಲಾ ಆಲಸ್ಯಿಸುತ್ತಾ ಪಟ್ಟಣದಲ್ಲಿ ನಿರುದ್ಯೋಗಿಯಾಗಿ ಕುಳಿತರೆ ಅವರು ಹಾಳಾಗುವರಲ್ಲದೆ ರಾಷ್ಟ್ರವೂ ಹಾಳಾಗುವದು.'

ಮನೆತನದ ವಕೀಲರು.

'ಪರದೇಶಗಳಲ್ಲಿ ಪ್ರತಿಯೊಂದು ಸಂಸಾರಕ್ಕೂ ಒಬ್ಬೊಬ್ಬ ಪಲಹೆಗಾರನಿರುತ್ತಾನೆ. ಮನೆತನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಡಿಸುವುದಕ್ಕಾಗಿ ವಕ್ಕೀಲರನ್ನಿಟ್ಟುಕೊಳ್ಳಲಾಗುತ್ತದೆ. ಈ ಪದ್ಧತಿಯು ನಮ್ಮ ದೇಶದಲ್ಲಿ ಇಲ್ಲವೆಂಬುದು ನಿಜ. ವಕೀಲರು ಮುಂದೆ ಬರಬೇಕಾದರೆ ಜನರಲ್ಲಿ ಜಗಳಗಳಾಗಬೇಕು, ಅವರು ಕೋರ್ಟಿಗೆ ಬರುವಂತೆ ಮಾಡಬೇಕು ಎಂದು ಪ್ರಯತ್ನಿಸುವದು ಸರಿಯಲ್ಲ. ಹೀಗೆ ಪ್ರಯತ್ನಿಸುವದರಿಂದ ವಕೀಲ ವೃತ್ತಿಯ ಪತನವಾಗುವುದಲ್ಲದೆ ಪಕ್ಷಗಾರನೂ ಹಾಳಾಗುವನು. ಜಗಳವನ್ನು ತೀರಿಸುವದೊಂದೇ ವಕೀಲನ ಕೆಲಸವಲ್ಲ. ಹಳ್ಳಿಗಳನ್ನು ಉದ್ಧಾರಮಾಡಬೇಕೆಂದು ಹಳ್ಳಿಗರನ್ನು ಮುಂದಕ್ಕೆ ತರಬೇಕೆಂದು ಈಗೀಗ ಪ್ರಯತ್ನಗಳು ನಡೆಯುತ್ತಿವೆ. ನಿಧಾಯಕ ಕಾರ್ಯಕ್ರಮವು ರಾಷ್ಟ್ರದ ಮುಂದಿದೆ. ಇದರಲ್ಲಿ ವಕೀಲರೂ ತನ್ನ ಪಾಲಿನ ಕಾರ್ಯವನ್ನು ಮಾಡಬೇಕಾದೀತು. ರಾಷ್ಟ್ರೋದ್ಧಾರದ ಕಾರ್ಯವು ವಕೀಲರ ಕರ್ತವ್ಯವಲ್ಲವೇ? ಗ್ರಾಮಗಳನ್ನು ಸಜೀವವನ್ನಾಗಿ ಮಾಡುವದು ಅವರ ಕೈಯಲ್ಲಿದೆ. ಆದ್ದರಿಂದ ವಕೀಲರು ಕೇವಲ ಧನದಾಹೆಗೆ ಬಳಿಬೀಳದೆ ಸರ್ವೋಪಯೋಗ ಕಾರ್ಯ ರಂಗಕ್ಕೆ ಕೈಹಾಕಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ. ಅಪಾರ ಸಂಪತ್ತನ್ನುಗಳಿಸಬೇಕೆಂಬ ದನಗಳು ಹೋದವು. ಸಿಕ್ಕಷ್ಟರಲ್ಲಿಯೇ ಸಂತುಷ್ಟರಾಗಿ ಹಳ್ಳಿಗಳ ಪ್ರಶಾಂತ ವಾತಾವರಣದಲ್ಲಿ ವಕೀಲರು ತಮ್ಮ ಜೀವಮಾನವನ್ನು ಯಾಕೆ ಕಳೆಯಬಾರದು?'

ಚೇಂಬರ್ ಕೌನ್ಸೆಲ್ ಯೋಜನೆ.

'ಇನ್ನು ವಕೀಲರಲ್ಲಿನ ನಿರುದ್ಯೋಗವನ್ನು ನಿವಾರಿಸಲು ಮತ್ತೊಂದು ಮಾರ್ಗವಿದೆ. ಚೇಂಬರ್ ಕೌನ್ಸೆಲ್ ಯೋಜನೆಯನ್ನು ನಾವು ಪ್ರಾರಂಭಿಸಬೇಕು. ಎಲ್ಲ ವಕೀಲರು ಉತ್ತಮ ವರ್ಗದವರೆಂದು ಹೇಳಲಿಕ್ಕೆ ಬರುವಂತಿಲ್ಲ. ಕೆಲವರಿಗೆ ಕೋರ್ಟಿನಲ್ಲಿ ವಾದಿಸುವ ಯೋಗ್ಯತೆಯು ಹೆಚ್ಚಾಗಿ ಇರುತ್ತದೆ. ಮತ್ತೆ ಕೆಲವರು ಕಾಯಿದೆ ಸಲಹೆಯನ್ನು ಕೊಡಲು ಮಾತ್ರ ಯೋಗ್ಯರಿರುತ್ತಾರೆ. ಆದ್ದರಿಂದ ಎಲ್ಲರಿಗೂ ಅನುಕೂಲವಾಗುವಂತಹ ಕೌನ್ಸೆಲ್ ಯೋಜನೆಯನ್ನು ಪ್ರಾರಂಭಿಸಬೇಕಾದ ಕಾಲವು ಈಗ ಬಂದಿದೆ.'

ಸಾರ್ವಜನಿಕ ಕಾರ್ಯ.

'ವಕೀಲರು ಸಾರ್ವಜನಿಕ ಕಾರ್ಯದ ಪಾವಿತ್ರ್ಯವನ್ನು ತಿಳಿದುಕೊಳ್ಳದಿರುವುದು ದುರ್ದೈವವು. ವ್ಯಾಪಾರಿಗಳು ಲಾಭದ ಸಲುವಾಗಿ ಬಡಿದಾಡುವಂತೆ ವಕೀಲರು ತಮ್ಮ ಫೀ ಸಲುವಾಗಿ ಬಡಿದಾಡುವರು. ಇದು ಸರಿಯಲ್ಲ. ನಾವು ನಮ್ಮ ಆತ್ಮ ಶುದ್ಧಿಯನ್ನು ಮಾಡಿಕೊಂಡು ಸನ್ಮಾರ್ಗವನ್ನರಿತುಕೊಂಡು ನಮಗೂ, ಸಾರ್ವಜನಿಕರಿಗೂ ಹಿತವಾಗುವ ರೀತಿಯಲ್ಲಿ ನಡೆದುಕೊಳ್ಳಬೇಕು. ನಮ್ಮ ಲೋಪದೋಷಗಳನ್ನು ತಿದ್ದಿಕೊಳ್ಳಬೇಕು. ಕೆಲವು ನಿರ್ದಿಷ್ಟ ನೈತಿಕ ವಿಷಯಗಳನ್ನು ಹಾಕಿಕೊಂಡು ಅವುಗಳಂತೆಯೇ ಆಚರಿಸಬೇಕು. ಅಂದರೆ ಮಾತ್ರ ಕೀರ್ತಿಯು ಶೋಭಾಯಮಾನವಾಗುವುದು.'

ಕೊನೆಗೆ ಅವರು ಕೋರ್ಟಿನಲ್ಲಿ ವಿಶೇಷವಾಗಿ ಉಳಿಯುತ್ತಿರುವ ಕೆಲಸವನ್ನು ತೀರಿಸಲು ಅಲ್ಲಲ್ಲಿ ಸ್ಥಾಪ್ರಸಿದ್ಧ ವಕೀಲರನ್ನು ಗೌರವ ನ್ಯಾಯಾಧೀಶರನ್ನಾಗಿ ನಿಯಮಿಸಬೇಕೆಂದು ಸೂಚಿಸಿದರು.

'ಸ. ಕ.'

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅದರಲ್ಲಿ ಹಿಂದಿನ ವರ್ಷದ ಪೂರ್ತಿಯಾಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವಹಿವಾಧಿ 2,21,959–6–0 ರೂ. ವಿಮಾ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹೊಣೆ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಮಾಡಿಟ್ಟದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುನರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಮೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿಯಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು, ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ, ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದಾದ ಕಂಪೆನಿಯು ಇದಕ್ಕಿಂತ 25 ವರ್ಷಗಳ ಮುಂದೆ ಸ್ಥಾಪಿಸಲ್ಪಟ್ಟದ್ದಾಗಿದೆ.

ವಿಮಾ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮಾ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮಾ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮಾ ಕಂತಿನ ಆದಾಯವು ರೂ. 3,66,198–13–0, ಗತ ವರ್ಷದ್ದು 2,36,767–6–6 ಆಗಿದೆ.

ಜೀವ ವಿಮಾ ಫಂಡು:—ಈ ಕಂಪೆನಿಯು ಜೀವ ವಿಮಾ ಫಂಡು ರೂ. 75,258–14–9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037–8–4 ವಜಾ ಕಳೆದು ರೂ. 21,00,421–1–3ಕ್ಕೆ ಏರಿದೆ. ಈ ಕೆಳಗೆ ಅವರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.	ವಿಮಾ ಕಂತು.	ಜೀವ ವಿಮಾ ಫಂಡು.
1ನೇ ವರ್ಷದ	ರೂ. 1,46,949	ರೂ. 15,619
2ನೇ ವರ್ಷದ	,, 2,36,767	,, 75,259
3ನೇ ವರ್ಷದ	,, 3,66,199	,, 2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮಾ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗೆಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮಾ ಕಂಪೆನಿಗಳ ಆಕ್ಟಿನ ಮೇರೆ ತೀರ್ಪಣಾತಿ:—ಈ ಖಾನೂನು ಮೇರೆ ತೀರ್ಪಣಾತಿ ಮಾಡತಕ್ಕದ್ದಿದ್ದ ರೂ, 2 ಲಕ್ಷವನ್ನು ಪೂರ್ತಿಯಾಗಿ ಡಿವಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಸಿ. ಯಂ. ತಿಮ್ಮಯ್ಯ,
(52–28) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಕೊಡಗಿನ ಭವಿಷ್ಯತ್ತು.

ಲೇಖಕ:-ಬಿ. ಗಣಪತಿ.

ತಾರೀಕು 16-12-38 ರ 'ಕೊಡಗು' ಪತ್ರಿಕೆಯಲ್ಲಿ 'ಕೊಡಗಿನ ಭವಿಷ್ಯತ್ತೂ ಮತ್ತು ಕಾರ್ಯ ಸಾಧಿಸುವವರೂ' ಎಂಬ ಶಿರೋನಾಮದಿಂದ ಪ್ರಕಟವಾಗಿದ್ದ ಲೇಖನವನ್ನು ಅದಕ್ಕೆ ಸಲ್ಲತಕ್ಕ ನಿಷ್ಠೆಯಿಂದ ಓದಿದೆನು. ಲೇಖನವು ಅಸಂಪೂರ್ಣವಾಗಿದ್ದರೂ, ಆ ಲೇಖನವನ್ನು ಮನಸ್ಸಿನಲ್ಲಿ ಈ ಲೇಖನವು ಎಬ್ಬಿಸಿರುವ ವಿಚಾರ ತರಂಗಗಳು ತನಕ್ಕೆ ಉತ್ತರವನ್ನು ಬರೆಯಲು ಪ್ರೇರೇಪಿಸಿದವು. ಮುಖ್ಯವಾಗಿ ಲೇಖನವನ್ನು ಟೀಕಿಸುವ ನಾನಲ್ಲ. ಆದರೂ ಮನಸ್ಸಿಗೆ ಬಂದದ್ದನ್ನು ಜನತೆಯ ಮುಂದಿಡಬಯಸುವನಾದ್ದರಿಂದ ಇದರಲ್ಲಿ ವೈಪರೀತ್ಯವನ್ನು ಕಲ್ಪಿಸಕೂಡದು.

ಲೇಖಕರೇ, ನಿಮ್ಮ ಲೇಖನಕ್ಕೆ ಪ್ರಶ್ನೆಗಳ ಮೂಲತಃ ಅಭಿಪ್ರಾಯವೇ ಕಾರಣವಾಗಿರುವುದರಿಂದ ನೀವು ಪ್ರಶ್ನೆಗಳನ್ನು ಪರಂಬರಿಸಿ ಉತ್ತರಿಸಲು ಕಾರಣರಾಗಿ ನಂಬುತ್ತೇನೆ.

(1) ನೀವು ಸುದೀರ್ಘವಾದ ಲೇಖನವನ್ನು 'ಒರಿದಿನ್ದರು ಜನಿಷ್ಯತ್ತಿನ ವಿಚಾರದಲ್ಲಿ ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲೆ, ಕೊಡಗಿನಲ್ಲಿ ಈಗ ಈ ವಿಚಾರದಲ್ಲಿ ಹೋರಾಡುತ್ತಿರುವ ಎಲ್ಲಾ ಪಂಗಡದವರಿಂದಲೂ ಸಮ್ಮತಿ ಪಡೆಯಲು ಪ್ರಯತ್ನಿಸಿದಂತೆ ಕಾಣುವುದಲ್ಲಾ ಒಂದೆಡೆ 'ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂದೂ' ಇನ್ನೊಂದೆಡೆ 'ಮೈಸೂರಿಗೆ ಸೇರುವಂತೆ ತೀರ್ಮಾನಿಸಿದರೆ ತಪ್ಪಾಗಲಾರದೆಂದೂ' ಬರೆದಿರುವಿರಲ್ಲಾ, 'ನೀವು ನಿಮ್ಮ ಲೇಖನವಲ್ಲಿ ಹಾಕಿದ ಪ್ರಶ್ನೆಗಳಿಗೆ ಉತ್ತರವೀಯದಿದ್ದಲ್ಲಿ ಕೊಡಗಿನ ಮುಖಂಡರು ಕೊಡಗು ಪ್ರತ್ಯೇಕವಿರಬೇಕೆಂಬ ತಮ್ಮ ಇಚ್ಛೆಗೆ ಮಣ್ಣು ಹಾಕಬೇಕೆ'ಂದೂ ಬರೆದಿರುವಿರಿ. ಅಂದ ಮೇಲೆ ನೀವು ಮದ್ರಾಸಿಗೆ ಅಥವಾ ಮೈಸೂರಿಗೆ ಸೇರಲೊಪ್ಪುವಿರೆಂದೂ, ಪ್ರತ್ಯೇಕ ಇಡಲಿಚ್ಛಿಸುವವರು ಸಮಂಜಸವಾದ ಕಾರಣ ಕೊಟ್ಟರೆ ಅವಕ್ಕೂ ಒಪ್ಪುವಿರೆಂಬ ಅರ್ಥವಾಗುವುದಿಲ್ಲವೇ? ಇದರಿಂದ ನೀವು ಕೊಡಗಿನ ಭವಿಷ್ಯದ ವಿಚಾರ ಯಾವ ನಿರ್ಣಯಕ್ಕೂ ಬರಲಿಲ್ಲವೆಂಬುದು ವೇದ್ಯವಾಗದೇ? ಒಂದು ನಿಶ್ಚಿತ ಅಭಿಪ್ರಾಯಕ್ಕೆ ಬರದೆ 'ಕೊಡಗಿನ ಭವಿಷ್ಯತ್ತಿ'ನ ವಿಚಾರ ಲೇಖನ ಬರೆಯುವುದರ ಅರ್ಥವೇನು?

(2) 'ಅಖಿಲ ಭಾರತ ಕಾಂಗ್ರೆಸಿನ ಒಂದು ಅಂಗವಾದ ಕೊಡಗಿನ ಕಾಂಗ್ರೆಸಿನ ಠರಾವುಗಳನ್ನು ನೋಡಿದರೆ ಜನತೆಯ ಹಿತದೃಷ್ಟಿಯಿಂದ ಕೆಲಸ ಮಾಡದೆ ದೊಡ್ಡ ದೊಡ್ಡ ಜಮೀನ್ದಾರರ ಮತ್ತು ಯೂರೋಪಿನ್ ಪ್ಲಾಂಟರುಗಳಿಗಾಗಿ ಹೋರಾಡಲು ಸೊಂಟಕಟ್ಟಿರುವಂತೆಂದು ಯಾರಿಗೂ ಗೋಚರವಾಗದಿರದು' ಎಂದು ನೀವು ಬರೆದಿರುವಿರಿ. ಜನತೆಯ ಹಿತಕ್ಕಾಗಿಯೂ, ದೊಡ್ಡ ಜಮೀನ್ದಾರರ ಮತ್ತು ಯೂರೋಪಿಯನ್ನರ ಹಿತಕ್ಕಾಗಿಯೂ ಇಲ್ಲಿಯ ಕಾಂಗ್ರೆಸ್ಸು ಯಾವಾಗ ಮತ್ತು ಎಲ್ಲಿ ಠರಾವು ಮಾಡಿದೆ ಎಂಬದನ್ನು ತಿಳಿಸುವಿರಾ? ಜನತೆಯ ಹಿತಕ್ಕಾಗಿ ಕಾಂಗ್ರೆಸ್ಸು ಕೆಲಸವೂ ಮಾಡುತ್ತಿದೆಯೆಂಬ ಆರೋಪಣೆಯನ್ನು ಹೊರಿಸಲು ನಿಮಗಿರುವ ಆಧಾರಗಳೇನು?

(3) 'ಕೊಡಗಿನಲ್ಲಿ ಜನರಿಗಾಗಿ ಜನಮತದಂತೆ ನಡೆಸಲ್ಪಡುವ ಸರ್ಕಾರಕ್ಕೆ ಬದಲು ಪಬ್ಲಾಳಿಕೆಯ ರಾಜ್ಯ ಉಳಿದಿದೆಯೆಂದೂ, ಆದ್ದರಿಂದ ಮೈಸೂರಿಗೆ ಸೇರುವುದು ತಪ್ಪಾಗಲಾರದೆಂದೂ' ಬರೆದಿರುವಿರಿ. ನಿಜ! ಕೊಡಗಿನಲ್ಲಿ ನಿರಂಕುಶ ಆಡಳಿತ ನಡೆಯುತ್ತಿದೆಯೆಂಬುದು ನಿಜ!! ಆದರೆ ಮೈಸೂರಿಗೆ ಸೇರಿಸಿದರೆ ಇದು ಹೇಗೆ ಪರಿಹಾರವಾದೀತು? ಬಹುಶಃ ಲೇಖಕರ ಸ್ಮೃತಿ ಪತನದಿಂದ ಮೈಸೂರಿನ ವಿದುರಾಶ್ವತ್ಥ ಘಟನೆಯು ಅಳಿಸಿಹೋಗಿರಬೇಕಲ್ಲವೇ? ಮೈಸೂರಿನ ಇಂಥಾ ಆಳ್ವಿಕೆಯನ್ನು ನೀವು 'ಜನರಿಗಾಗಿ ಜನಮತದಂತೆ' ನಡೆಸಲ್ಪಡುವ ಸರ್ಕಾರವೆನ್ನುವಿರೋ?

(4) '1935 ನೇ ಇಂಡಿಯಾ ಆಕ್ಟಿನಂತೆ ಫೆಡರಲ್ ಸರ್ಕಾರದಿಂದ ಮೈಸೂರು ಆಳಲ್ಪಟ್ಟಲ್ಲಿ ಕೊಡಗನ್ನೊಳಗೊಂಡ ಮೈಸೂರು ಸಂಸ್ಥಾನಕ್ಕೂ ಜವಾಬ್ದಾರಿ ಸರಕಾರ ಸಿಕ್ಕುವುದು .... ಇದರಿಂದ ನಮ್ಮ ದೇಶದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗಳೂ ಊರ್ಜಿತಗೊಳ್ಳುವವು. ಕೊಡಗನ್ನು ಸ್ಥಳೀಯ ರಾಷ್ಟ್ರವನ್ನಾಗಿ ನಿರ್ಮಿಸುವದರಿಂದ ರಾಜ್ಯಾಂಗದ ವ್ಯಯವು ಅಧಿಕವಾಗುವುದು' ಎಂದು ಬರೆದಿರುವಿರಿ. ಕೊಡಗು ಮೈಸೂರಿಗೆ ಸೇರಿದರೆ ನಮ್ಮ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಯು ಸುಧಾರಿತವಾಗುವ ನಂಬಿಕೆಯಾದರೂ ಏನು? ಮೈಸೂರಿಗೆ ಸೇರಿ ಜವಾಬ್ದಾರಿ ಸರಕಾರ ಪಡೆಯುವುದಕ್ಕಿಂತ ಪ್ರತ್ಯೇಕ ಹೋರಾಡಿ ಸ್ವತಂತ್ರ್ಯ ಸರ್ಕಾರ ಪಡೆಯಲಾಗುವುದಲ್ಲವೇನು? ಲೇಖಕರಿಗೆ ಬೇರೆಯವರನ್ನಾಶ್ರಯಿಸುವ ಈ ಮನೋವೃತ್ತಿ ಬರಲು ಶತಮಾನದ ಪಾರತಂತ್ರ್ಯವೇ ಕಾರಣವೆನ್ನಬೇಡವೇ? ಕೊಡಗನ್ನು ಸ್ಥಳೀಯ ರಾಷ್ಟ್ರವನ್ನಾಗಿರಿಸಿದರೆ ಅಧಿಕ ವ್ಯಯವಾಗುವದೆಂಬುವುದಕ್ಕೇನು ಕಾರಣ? ಈಗಿರುವ ತಲೆಭಾರದ ಸರ್ಕಾರವನ್ನಿಟ್ಟುಕೊಳ್ಳಬೇಕೆಂದು ವಾದಿಸುವವರಾರು? ಅಥವಾ ಇದೇ ರೀತಿಯೆ ಸರ್ಕಾರವಿರಬೇಕೆಂಬ ನಿಯಮವಿದೆಯೇನು?

(5) 'ಫೈಜಪುರ ಮತ್ತು ಹರಿಪುರ ಕಾಂಗ್ರೆಸ್ ಅಧಿವೇಶನಗಳಲ್ಲಿ ಎಲ್ಲಾ ಜೀಫ್ ಕಮಿಷನರುಗಳಿಂದ ಆಳಲ್ಪಡುವ ಸಂಸ್ಥಾನಗಳನ್ನೂ, ಬೇರೆಯಾಗಿರಿಸಲ್ಪಟ್ಟ ಪ್ರದೇಶಗಳನ್ನೂ ಬ್ರಿಟಿಷ್ ಇಂಡಿಯಾ ಆಧಿಪತ್ಯಗಳಿಗೆ ಸೇರಿಸಬೇಕೆಂದು ತೀರ್ಮಾನಿಸಿರುವರು' ಎಂದು ಉದ್ಧರಿಸಿರುವಿರಿ. ಇಂಥಾ ಕಂಥೋಕ್ತವಾದ ನಿರ್ಣಯವೆಲ್ಲಿದೆ? ಜೀಫ್ ಕಮಿಷನರುಗಳ ಪ್ರಾಂತ್ಯಗಳನ್ನೆಲ್ಲಾ ದೊಡ್ಡ ಪ್ರಾಂತ್ಯಗಳಿಗೆ ಸೇರಿಸಬೇಕೆಂದು ಕಾಂಗ್ರೆಸ್ ಮಹಾ ಸಭೆಯು ತೀರ್ಮಾನಿಸಿದ್ದರೆ, ಕೊಡಗು ಮತ್ತು ಆಜ್ಮೀರ್ ಮಿರ್ವಾರನ್ನು ಮಾತ್ರ ಮದ್ರಾಸು ಮತ್ತು ಸಂಯುಕ್ತ ಪ್ರಾಂತ್ಯಗಳಿಗೆ ಸೇರಿಸಲ್ಪಡುವೆ ಸರ್ಕಾರವೆನ್ನುವಿರೋ?

(6) 'ಕೊಡಗಿನಿಂದ ಡಿಲ್ಲಿಗೆ ವರ್ಕಿಂಗ್ ಕಮಿಟಿಗೆ ಡೆಪ್ಯುಟೇಶನ್ ಹೋದವರು ಕಮಿಟಿಯನ್ನು ಕಾಣಲಿಲ್ಲವೆಂದೂ, ಒಬ್ಬಿಬ್ಬರೊಡನೆ ಮಾತಾಡಿ ಬಂದಿರುವರೆಂದೂ ಊಹಿಸಿದ ನಿಮ್ಮ ಸಂದೇಹವು ಈಗ ನಿವಾರಿತವಾಗಿರುವದೇ? ಇಲ್ಲದ ಪಕ್ಷ ತಾ. 16-12-38 ರ 'ಕೊಡಗು' ಪತ್ರಿಕೆಯ 9 ನೇ ಪುಠವನ್ನವಲೋಕಿಸುವಿರಾ?

(7) 'ನಮ್ಮ ಹೆಚ್ಚಿನ ಫಲಭರಿತವಲ್ಲದ ಬೆಟ್ಟ ಪ್ರದೇಶದ ಮತ್ತು ....ಬೇರೆ.ಇಟ್ಟು ಹೇಗೆ ಸರ್ಕಾರ ನಡೆಸುವರೆಂಬುದು ನಮ್ಮ ಊಹನೆಯನ್ನು ಪೂರಾ ಮೀರುವಂತಿದೆ' ಎಂದು ಬರೆದಿರುವಿರಿ. ಕೊಡಗಿಗೆ ಪ್ರವೇಶಿಸಿವ ಪ್ರತಿಯೊಬ್ಬ ಮನುಷ್ಯನು ಈ ಭೂಮಿ ಫಲವತ್ತಾದ್ದೆಂದು ಹೊಗಳಿ ಹೋಗುತ್ತಿರುವಾಗ ನೀವು ಹೀಗೆ ಬರೆದಿರುವದು ವಿಷಾದಕರ, ನಿಮ್ಮ ಫಲಭರಿತ ಎಂಎ ಶಬ್ದಕ್ಕೆ ಏನಾದರೂ ಗೂಢಾರ್ಥವಿರುವದೇ? ಅಥವಾ ಕೊಡಗನ್ನು ಪೂರ್ಣ ಪ್ರವಾಸಿಸಿ ಅಪರ ಅನುಭವ ನಿಮಗಿದೆಯೋ? ನಿಮ್ಮ ಫಲಭರಿತ ಶಬ್ದದ ಅರ್ಥ ತಿಳಿಸುವಿರಾ? ಮದ್ರಾಸು ಮತ್ತು ಮೈಸೂರು ಕೊಡಗಿಗಿಂತ ಫಲಭರಿತವಾದ ಸೀಮೆಗಳೆಂದು ನಿಮ್ಮ ಭಾವನೆಯೋ?

(8) 'ಪ್ರಾಂತೀಕ್ವವನ್ನೇ ಬಯಸುವವರಿಗೆ ಜನಹಿತಕರವಾದ ಸರ್ಕಾರ ನಡೆಸಿ ಅನುಭವವಿದೆಯೋ ಅಥವಾ ನಡೆಸುವ್ಯಕ್ತಿಯನ್ನು ಉಚ್ಚ ತರಗತಿಯಿಂದ ಪಡೆಸಿ ಮೂಡಿರುವರೋ' ಎಂದು ಕೇಳುವಿರಿ. ನಿಜ! ಇಂಥಾ ಸಂಗತಿಯನ್ನು ಪರಿಶಿಸುವ ಮೊದಲು ನಮ್ಮ ಹೆಸರಿನ ಹಿಂದಕ್ಕೂ, ಮುಂದಕ್ಕೂ ಬಿರುದುಗಳನ್ನು ಹಚ್ಚಿ ಕೊಳ್ಳಲಿಲ್ಲ ನಿಜ!! ಆದರೆ ಈ ಪತನಕ್ಕಿಂತ ದಿನಚರ್ಯದಲ್ಲಿ ಉಂಟಾಗುವ ಅನುಭವವು ಮೇಲೆಂಬುದನ್ನು ನೀವು ಅಲ್ಲಗಳೆಯಲಾರಿರಷ್ಟೆ? ಇಂಥಾ ಸರ್ಕಾರ ನಡಿಸಲು ಕೊಡಗಿನವರಿಗೆ ಇಷ್ಟರ ವರೆಗೆ ಅವಕಾಶ ದೊರೆತ್ತಿಲ್ಲವಾದುದರಿಂದ ಅದರ ಅನುಭವವಿಲ್ಲ. ಅಂಥಾ ಅವಕಾಶವನ್ನು ಪಡೆಯಲಿಕ್ಕಾಗಿಯೇ ಕೊಡಗನ್ನು ಪ್ರತೇಕ ಪ್ರಾಂತ್ಯವಾಗಿಟ್ಟುಕೊಳ್ಳಬೇಕೆಂದು ಹೋರಾಡುವದಾಗಿದೆ. ಅಂಥಾ ಅವಕಾಶ ಮತ್ತು ಅನುಭವ ದೊರೆತ ಮೇಲೆ, ಅದು ಜನರಿಗೆ ಪ್ರಯೋಜನಕಾರಿಯಾಗದಿದ್ದರೆ ಕೊಡಗನ್ನು ದೊಡ್ಡ ಪ್ರಾಂತ್ಯಕ್ಕೆ ಸೇರಿಸುವ ಆಲೋಚನೆ ಮಾಡಬಹುದಲ್ಲವೇ?

(9) 'ಕಾಂಗ್ರೆಸ್ ನಿಬಂಧನೆಯಂತೆ ಕೊಡಗಿನಲ್ಲಿ ಪಾನನಿರೋಧವನ್ನು ಜಾರಿಯಲ್ಲಿ ತಂದರೆ ಸರ್ಕಾರದ ಆಧ್ಯಾಯದಲ್ಲಿ ಕೆಡಿಮೆಯಾಗುವ ಹಣವನ್ನು ಯೋಜನೆಯಿಂದ ಸಮಗಟ್ಟುವಿರೆಂದು' ಕೇಳಿರುವಿರಿ ಈ ವಿಚಾರದಲ್ಲಿ ನೀವು ವ್ಯಸನಪಡಬೇಕಿಲ್ಲ. ಪಾನನಿರೋಧವನ್ನು ಜಾರಿಗೆ ತಂದ ಪ್ರಾಂತಗಳು ಕೈಕೊಂಡಿರುವ ಕಾರ್ಯಕ್ರಮ ನಿಮ್ಮ ಗೋಚರಕ್ಕೆ ಬಂದಿದೆಯಷ್ಟೆ? ಹಾಗೆಯೇ ಈ ಪ್ರಾಂತ್ಯಕ್ಕೆ ಅನ್ವಯಿಸುವ ಕಾರ್ಯಕ್ರಮಗಳನ್ನು ಕೈಕೊಳ್ಳಬಾರದೇಕೆ?

ಮಹನೀಯರೇ, ಇನ್ನಾದರೂ ಬರೆಯುವ ಮೊದಲು ವಿಷಯಗಳನ್ನು ಚೆನ್ನಾಗಿ ವಿಮರ್ಶಿಸುವಿರಾ? ವಿಮರ್ಶಿಸಿ ಇವಕ್ಕೆ ಉತ್ತರವೀಯಲು ಮರೆಯಲಾರಿರಷ್ಟೆ? ಉತ್ತರವೀಯಲು ತಪ್ಪಿದರೆ ನಿಮ್ಮ ಲೇಖನದ ಅಸತ್ಯತೆಯನ್ನು ನೀವೇ ಒಪ್ಪಿದಂತಾಗುವದೆಂಬುದನ್ನು ನೆನಪಿನಲ್ಲಿಡಿ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿ.

ಪ್ರತಿನಿಧಿಗಳ ಚುನಾವಣೆ ವಿಭಾಗ.

ತ್ರಿಪುರಿ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ ವೇಳಾ ಪತ್ರಿಕೆ.

1. ಮತದಾರ ಸಂಘಗಳನ್ನು ಮೂಡಿ ಪ್ರಾಂತೀಕ ಚುನಾವಣೆ ಅಧಿಕಾರಿಯ ಕಡೆಗೆ ಕಳಿಸುವದು-24-12-38.

2. ಮತದಾರ ಸಂಘಗಳನ್ನು ಪ್ರಸಿದ್ಧಿಸುವದು-27-12-38.

3. ಪ್ರಾಂತಿಕ ಕಾಂಗ್ರೆಸ್ ಕಮಿಟಿಕಚೇರಿ ಮತ್ತು ಜಿಲ್ಲಾ ರಿಟರ್ನಿಂಗ್ ಆಫೀಸರ ಇವರು ನಾಮಪತ್ರ ಸ್ವೀಕರಿಸುವ ಕೊನೆಯ ತಾರೀಕು 31-12-38. ವೇಳೆ ಸಂಜೆ 6 ಗಂಟೆ.

4. ನಾಮ ಪತ್ರಗಳನ್ನು ಪರಿಶೀಲಿಸಿ ಉಮೇದುವಾರರ ಹೆಸರನ್ನು ಪ್ರಸಿದ್ಧಿಸುವದು-2-1-1939.

5. ನಾಮ ಪತ್ರಗಳನ್ನು ಹಿಂತೆಗೆದುಕೊಳ್ಳುವದು; ಮಧ್ಯಾನ್ಹ 3 ಗಂಟೆಯವರೆಗೆ-3-1-39.

6. ಹಿಂತೆಗೆದುಕೊಂಡವರು ಹೆಸರುಗಳನ್ನು ಪ್ರಸಿದ್ಧಿಸುವದು-3-1-39.

7. ಚುನಾವಣೆ, ಮತದಾನ ಬೆಳಿಗೆ 8-12, ಮಧ್ಯಾನ್ಹ 2-6. 8-1-39.

8. ಮತದಾನ ಪೆಟ್ಟಿಗೆಗಳನ್ನು ರಿಟರ್ನಿಂಗ್ ಆಫೀಸರನಿಗೆ ಮುಟ್ಟಿಸುವದು ರಾತ್ರಿ 9 ಗಂಟೆ ಒಳಗೆ-9-1-39.

9. ಮತಗಣನೆ, (ಮಧ್ಯಾನ್ಹ 11ರಿಂದ 1 ರೊಳಗೆ ಪ್ರಾರಂಭ)-10-1-39.

10. ಮತಗಣನೆಯ ಫಲಿತಾಂಶವನ್ನು ರಿಟರ್ನಿಂಗ್ ಆಫೀಸರನು ಜಾಹೀರು ಮಾಡುವದು-10-1-39.

11. ಚುನಾವಣೆ ರಿಕಾರ್ಡು ಮತ್ತು ಪರಿಣಾಮದ ವರದಿಯನ್ನು ಪ್ರಾ. ಕಾ. ಕ. ಗೂ, ಪ್ರಾ. ಚು. ಅಧಿಕಾರಿಯ ಕಡೆಗೂ ಕಳಿಸುವ ತಾ. 11-1-39.

12. ಕ. ಪ್ರಾ. ಕಾ. ಕ. ಕಚೇರಿಯ ಮೂಲಕ ಪ್ರಾಂತೀಕ ಚುನಾವಣೆ ಅಧಿಕಾರಿಯು ಫಲಿತಾಂಶವನ್ನು ಪ್ರಸಿದ್ಧಿಸುವದು-15-1-39.

13. ಚುನಾವಣೆ ತಕರಾರಿನ ಅರ್ಜಿಗಳು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಚೇರಿಗೆ ತಲುಪುವ ಕೊನೆಯ ತಾರೀಕು 20-1-39.

ನಾರಾಯಣರಾವ್ ಜೋಶಿ,
ಪ್ರಾಂತಿಕ ಚುನಾವಣೆ ಅಧಿಕಾರಿ.

ದೇವದತ್ತ.

ಸಾಮಾಜಿಕ ಕಾದಂಬರಿ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

'ನಿನ್ನ ವಿಲ್ಲು' ಪೆಟ್ಟಿಗೆಯಲ್ಲಿಯೇ ಇದೆ. ಹಾಗಾದರೆ ದಯವಿಟ್ಟು ಬಂಡಿಯನ್ನು ಹತ್ತುವವಳಾಗು. ನಾನು ನಿನ್ನನ್ನೂ, ಬಂಡಿಯನ್ನೂ ಅಲ್ಲೇ ಬಿಟ್ಟು ಈಗಾಗಲೇ ಬೊಂಬಾಯಿಗೆ ಹೊರಟು ಹೋಗುತ್ತೇನೆ. ಆಳು ಬಂದು ನಾಳೆ ಬಂಡಿಯನ್ನು ಕೊಂಡೊಯ್ಯುವನು. ನೀನು ನಿನ್ನ ಅಜ್ಜಿಯ ನೆಗಾಗಲೀ ಎಲ್ಲಿಗೆ ಬೇಕಾದರೂ ಹೋಗ ಒಹುದು' ಎಂದು ಬಂಡಿಯನ್ನಡರಿ, ನಡೆಸಲುದ್ಯುಕ್ತನಾದನು. ಕಮಲೆಯು ಹಿಂದಿನ ಆಸನದಲ್ಲಿ ಕುಳಿತಳು. ಆಗಂತುಕನು ಕೈಯಲ್ಲಿದ್ದ ಬಂಡೂಕವನ್ನು ಸನುದ್ರದೊಳಗೆ ಬಿಸುಟು 'ಸಹೋದರಿ, ಹಾಗಾದರೆ ನೀನು ಹೋಗುವೆಯೋ' ಎಂದು ಬಂಡಿಯಕ್ಕದಲ್ಲಿ ನಿಂತು ಕೇಳಿದನು.

ಕಮಲೆ–ಮಹಾಶಯರೇ, ದಯವಿಟ್ಟು ನೀವು ಹೊಟೇಲಿಗೆ ಬರಬೇಕು. ನನ್ನ ಪ್ರಾಣ ಹೋಗುವ ಕಾಲದಲ್ಲಿ ದೈವಸಹಾಯದಂತೆ ಮಾಡಿದ ನಿಮ್ಮ ಸಹಾಯವು ಚಿರಸ್ಮರಣೀಯವಾದುದು. ನಿಮ್ಮನ್ನು ಬಿಟ್ಟು ನಾನೆಲ್ಲಿಯೂ ಹೋಗಲಾರೆ. ನಿಮ್ಮ ಹೆಚ್ಚಿನ ಪರಿಚಿತಿಯನ್ನರಿಯಲು ನನ್ನ ಮನಸ್ಸು ತವಕಿಸುತ್ತಿದೆ. ಆದುದರಿಂದ ದಯವಿಟ್ಟು ಬರುವವರಾಗಿ.'

ಯುವಕನು 'ನಾನೂ ಸಹ ಆದೇ ಹೊಟೇಲಿನಲ್ಲಿ ಈ ದಿವಸ ಉಳಿದಿರುತ್ತೇನೆ. ಗಾಳಿ ಸವಾರಿಗೋಸ್ಕರ ರಾತ್ರಿ ಊಟ ಮುಗಿಸಿ ಇಲ್ಲಿಗೆ ಬಂದಿದ್ದೆನು' ಎನ್ನುತ್ತ ವಸಂತನ ಬದಿಯಲ್ಲಿ ಹತ್ತಿ ಕುಳಿತನು. ಕತ್ತಲೆಯಲ್ಲಿ ಯುವಕನಿಗೆ ಕಮಲೆಯ ರೂಪವನ್ನು ಸರಿಯಾಗಿ ತಿಳಿಯಲು ಆಗಲಿಲ್ಲ. ಕಮಲೆಗೂ ಸಹ ಕತ್ತಲೆಯೂ, ನಾಚಿಕೆಯೂ ಯುವಕನ ಗುರುತನ್ನರಿಯಲು ಅಡ್ಡವಾದವು.

೧೫ ನೇ ಅಧ್ಯಾಯ.

ಹೊಟೇಲನ್ನು ಸಮೀಪಿಸಿದೊಡನೆ ಯುವಕನು ಬಂಡಿಯಿಂದಿಳಿದು ಹೊಟೇಲ್ ಕೂಲಿಯೊಬ್ಬನನ್ನು ಕರೆದು, ಕಮಲೆಯ ಸಾಮಾನುಗಳನ್ನೆಲ್ಲಾ ಒಂದು ಕೋಣೆಯೊಳಗೆ ಸಾಗಿಸಿದನು. ಜಾಜ್ವಲ್ಯಮಾನವಾಗಿ ಉರಿಯುತ್ತಿದ್ದ ವಿದ್ಯುಚ್ಛಕ್ತಿಯ ದೀಪದ ಬೆಳಕಿನಲ್ಲಿ ನಿಂತಿದ್ದ ಯುವಕನ ಮುಖವನ್ನು ನೋಡಿದೊಡನೆ, ಕಮಲೆಯು ಒಂದು ಬಲವಾದ ನಿಟ್ಟುಸುರನ್ನು ಬಿಟ್ಟು ತಲೆಯನ್ನು ಬಗ್ಗಿಸಿದಳು. ಯುವಕನವನ್ನೇನೂ ಕಾಣಲಿಲ್ಲ, ಅಷ್ಟರಲ್ಲಿ ವಸಂತ ಮದನನು ಹೊಟೇಲ್ ಮೇನೇಜರ ಹತ್ತಿರ ಏನೋ ಮಾತಾಡಿ, ಬಂಡಿಯ ಹತ್ತಿರ ಬಂದು, 'ಸಾಮಾನುಗಳೆಲ್ಲಾ ಇಳಿಯಿತೇ? ನನಗೆ ಹೊತ್ತಾಯಿತು. ಕಮಲಾ (ಪಿಸುಮಾತಿನಿಂದ) ಸರ್ವ ಅಪರಾಧಗಳನ್ನು ಕ್ಷಮಿಸು. ನಾನೀಗಾಗಲೇ ಬಂಡಿಯನ್ನು ಒಳಗೆ ಇಟ್ಟು ಹೋಗುತ್ತೇನೆ.' ಎಂದನು. ಕಮಲೆಯು ನಟ್ಟುಸಿರಿನಿಂಧ ಮರುನುಡಿಯನ್ನಿತ್ತಳು. ಅಷ್ಟರಲ್ಲಿ ಆಳು 'ಕೋಣೆಯು ಸಿದ್ಧವಾಗಿದೆ. ಸಾಮಾನುಗಳನ್ನೆಲ್ಲಾ ಒಳಗ ಇಟ್ಟರುತ್ತೇನೆ' ಎಂದನು. ಯುವಕನು ಹೊಟೇಲಿನ ಮೊಗವಾಡದಲ್ಲಿ ನಿಂತು, ಕಮಲೆಯು ಹೊರಗೆ ಬರುವುದನ್ನು ನೋಡುತ್ತಾ ನಿಂತಿದ್ದನು. ಆದರೆ ಕಮಲೆಯು ಕೆಳಗಿಳಿಯಲೇ ಇಲ್ಲ. ಸೂಕ್ಷ್ಮದೃಷ್ಟಿಯಿದ್ದ ಯುವಕನು ಕೂಡಲೇ, ತನ್ನ ಕೋಣೆಯೊಳಕ್ಕೆ ಹೋದನು. ಕಮಲೆಯು ಬಂಡಿಯಿಂದಿಳಿದು, ಕತ್ತನ್ನು ಬಗ್ಗಿಸಿ ತನಗಾಗಿ ಸಜ್ಜುಮಾಡಿಟ್ಟಿದ್ದ ಕೋಣೆಯೊಳಕ್ಕೆ ಹೋದಳು. ವಸಂತ ಮದನನು ಬಂಡಿಯನ್ನು 'ಷೆಡ್ಡಿ'ನಲ್ಲಿ ನಿಲ್ಲಿಸಿ, ಹಾರ್ಬರಿನ ಮುಖವಾಗಿ ಹೊರಟು ಹೋದನು. ಸ್ವಲ್ಪ ಹೊತ್ತಿನಲ್ಲಿ ಬೊಂಬಾಯಿ ಸ್ಟೀಮರು ಹೊರಟ ಬಿಗಿಲು ಕೇಳಿಸಿತು.

ಕಮಲೆಯು ತನ್ನ ಕೊಟಡಿಯನ್ನು ಸೇರಿದೊಡನೆ ಪೆಟ್ಟಿಗೆಯನ್ನು ತೆರೆದು 'ವಿಲ್ಲನ್ನು ನೋಡಿದಳು. ಆ ಮೇಲೆ ಒಂದು ಬಲವಾದ ಉಸಿರನ್ನು ಬಿಟ್ಟು ಆರಾಮ ಕುರ್ಚಿಯಲ್ಲಿ ಕುಳಿತಳು. ಯುವಕನ ಮುಖವನ್ನು ಕಂಡಾಕ್ಷಣದಿಂದ ಅವಳು ಮನಸ್ಸಿನ ಹೆದರಿಕೆಯೆಲ್ಲಾ ಬಯಲಾಗಿತ್ತು. ಆದರ ಬದಲು ಮಹತ್ತರವಾದ ಲಜ್ಜೆಯು ತಲೆದೋರಿತ್ತು. ಅವಳು ಏನೇನೋ ಯೋಚಿಸುತ್ತಾ ಬಹಳ ಹೊತ್ತು ಕುಳಿತಳು. ಅನ್ನಪಾನವೇನೂ ಮುಟ್ಟಲಿಲ್ಲ. ಕಡೆಗೆ ನಿರ್ಧರಿಸಿ ಹತ್ತಿರದಲ್ಲಿ ನಿಂತಿದ್ದ ಹುಡುಗನನ್ನು ಕರೆದು, ಎದುರಿನ ಕೋಣೆಯಲ್ಲಿದ್ದ ನಮ್ಮ ಯುವಕನನ್ನು ಬರ ಹೇಳಿದಳು.

ಯುವಕನು ನಡೆದ ಸಂಗತಿಗಳನ್ನೆಲ್ಲಾ ಯೋಚಿಸುತ್ತಾ ಒಂದು ಕುರ್ಚಾಲು ಕುರ್ಚಿಯ ಮೇಲೆ ಒರಗಿದ್ದನು. ತಾನು ಬಹು ಯೋಗ್ಯವಾದ ಒಂದು ಕೆಲಸವನ್ನು ಮಾಡಿದೆನೆಂದು ಅವನ ಮನಸ್ಸು ಆನಂದದಿಂದ ತುಂಬಿತ್ತು. ಆ ಯುಷ್ಮತಿಯು ಯಾರಿರಬಹುದೆಂದು ಅರಿಯಲು ಅವನು ತವಕಿಸುತ್ತಿದ್ದನು, ಆದರೆ ಅವಳ ಅಪ್ಪಣೆಯಿಲ್ಲದೆ ಅವಳ ಕೋಣೆಯೊಳಗೆ ಪ್ರವೇಶಿಸುವುದು ಅಯೋಗ್ಯವೆಂದು ತಿಳಿದು, ಅದೇ ಯೋಚನೆಯಲ್ಲಿ ಮಗ್ನನಾಗಿದ್ದನು. ಹುಡುಗನು ಬಂದು 'ಅಮ್ಮನವರು ಕರೆಯುತ್ತಾರೆಂ'ದೊಡನೆ ಅವನ ಮೈಯಲ್ಲಿ ರೋಮಾಂಚನವಾಯಿತು. ಥಟ್ಟನೆ ಎದ್ದು ನೀತನು. ತಾನುಟ್ಟಿದ ಉಡುಪನ್ನೇನೂ ಒದಲಾಯಿಸಿರಲಿಲ್ಲ. ತಲೆ ಕೂದಲನ್ನು ಸರಿಯಾಗಿ ಬಾಚಿದ್ದನು. ಅಂತು ಒಮ್ಮೆ ಕನ್ನಡಿಯನ್ನು ನೋಡಿ, ಕಮಲೆಯ ಕೋಣೆಗೆ ಹೋದನು.

ಯುವಕನ ಆಗಮನವನ್ನೆ ಇದಿರು ನೋಡುತ್ತಾ ಕಮಲೆಯು ಕುಳಿತ್ತಿದ್ದಳು. ಕದವನ್ನು ತೆರೆದು ತನ್ನ ಆಗಮನವನ್ನೇ ಹಾರೈಸುತ್ತಾ ಕಾದಿದ್ದ ಕಮಲೆಯ ನಸುಮುಖವನ್ನು ನೋಡಿದೊಡನೆ ಯುವಕನು ಹಟತ್ತಾಗಿ 'ಕಮಲಾ' ಎಂದು ಚೀರಿ ಬೆಪ್ಪಾದನು. ಕಮಲೆಯು ತಟ್ಟನೆ ಎದ್ದು, ಹರ್ಷಯುಕ್ತಳಾಗಿ ನೀಡಿದ ಕೈಗಳಿಂದ 'ಪ್ರಾಣಸಖ' ಎನ್ನುತ್ತಾ ಹತ್ತಿರ ಬಂದು ಯುವಕನಿಗೆ ಸುಖಾಗಮನವನ್ನು ಕೊಟ್ಟಳು. ಯುವಕನು ಕಮಲೆಯನ್ನು ಬಲವಾಗಿ ಆಲಿಂಗಿಸಿದನು. ಒಂದು ಕ್ಷಣಕಾಲ ಅವರು ತಮ್ಮ ಸ್ಥಿತಿಯನ್ನೇ ಮರೆತಿದ್ದರು. ಕೂಡಲೆ ಅವರಿಬ್ಬರೂ ಒಂದೊಂದು ಆಸನಗಳಲ್ಲಿ ಹರ್ಷಯುಕ್ತವಾಗಿ ಕುಳಿತರು.

ಕಮಲ–'ದೇವದತ್ತಾ' ನಾವಿಬ್ಬರು ಒಬ್ಬರನ್ನೊಬ್ಬರು ಕಾಣದೆ ಅನೇಕ ವರ್ಷಗಳಾದವಷ್ಟೆ! ಈ ಮಧ್ಯೆ ನಿನ್ನ ಜೀವನದಲ್ಲಿ ನಡೆದ ಸಂಗತಿಗಳನ್ನು ತಿಳಿಯಲು ನನ್ನ ಮನಸ್ಸು ಬಹಳ ತವಕಿಸುತ್ತಿದೆ. ದೀಪದ ಎದುರಿನಲ್ಲಿ ನಿನ್ನ ಮುಖವನ್ನು ನೋಡಿದೊಡನೆಯೇ ನನ್ನ ಹೆದರಿಕೆ ಎಲ್ಲಾ ಬದಲಾಯಿತು. ಅವರ ಬದಲು ಅಪಾರವಾದ ನಾಚಿಕೆಯು ತಲೆದೋರಿತು. ಆದರೆ ನಿನ್ನ ಗುಣ ನಡತೆಗಳು ನನಗೆ ಚೆನ್ನಾಗಿ ಗೊತ್ತಿವೆ. ಅಲ್ಲದೆ ನಡೆದ ಸಂಗತಿಗಳನ್ನೂ ನೀನು ಕಣ್ಣಾರೆ ಕಂಡಿರುವೆಯಷ್ಟೆ.' ಎಂದು ಬಲವಾದ ನಿಟ್ಟುಸರನ್ನು ಬಿಟ್ಟು ನೆಲವನ್ನೇ ನೋಡುತ್ತಾ ಕತ್ತನ್ನು ಬಗ್ಗಿಸಿದಳು.

ದೇವದತ್ತ–'ಕಮಲ! ನಿನ್ನನ್ನು ಕಷ್ಟದಲ್ಲಿ ಕಾಣುವುದು ಎಷ್ಟು ಮಾತ್ರವೂ ನನ್ನ ಮನಸ್ಸಿಗೆ ಸಂತೋಷವಲ್ಲದಿದ್ದರೂ, ದುರಾದೃಷ್ಟದಿಂದ ನಿನಗೊದಗಿದ್ದ ಅಪಾರ ಸಂಕಷ್ಟದಲ್ಲಿ ನಿನ್ನನ್ನು ಪಾರುಮಾಡುವ ಮಹದ್ಭಾಗ್ಯವು ನನಗೆ ದೈವಶಾತ್ ದೊರಕಿದುದಕ್ಕೆ ನಾನೆಷ್ಟು ಧನ್ಯನೆಂದು ಹೇಳಲಸಾಧ್ಯ. ನಾವು ವಿದ್ಯಾರ್ಥಿಗಳಾಗಿರುವಾಗ್ಯೆ ನನಗೆ ನಿನ್ನ ಮೇಲೆ ಉಂಟಾಗಿದ್ದ ವ್ಯಾಮೋಹವನ್ನು ನಿನಗೀಗ ತಿಳಿಸಿದ್ದಾದರೆ ನಿನಗೆ ನಗೆಬಂದೀತು. ನೀನು ಶಾಲೆಯನ್ನು ಬಿಟ್ಟು ಹೋದೆ ಎಂಬ ಸಂಗತಿಯನ್ನು ಕೇಳಿದೊಡನೆ ನನ್ನ ಮನಸ್ಸು ಒಡೆದು ಹೋಯಿತು. ಅವರ ತಾಪವು, ಕಾಲವು ಹೋದ ಹಾಗೆ ಪರಿಸಮಾಪ್ತಿಯಾಗುತ್ತಾ ಬಂತು. ನೀನು ಆಗಲಿದ ಎರಡು ವರ್ಷಗಳಲ್ಲಿ ನಾನು ಮೆಟ್ರಿಕ್ಯೂಲೇಶನ್ ಪಾಸಾಗಿ ಬೊಂಬಾಯಿಗೆ ಹೋಗಿ ಕಳೆದ ವರ್ಷ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾದೆನು. ಎಷ್ಟು ಪೇಚ್ಚಾಡಿದರೂ ಇಂದಿನ ವರೆಗೆ ನನಗೊಂದು ಸರಕಾರಿ ನೌಕರಿ ದೊರೆಯಲಿಲ್ಲ. ಅವರ ಸಲುವಾಗಿಯೇ ನೆನ್ನೆ ಇಲ್ಲಿಗೆ ಒಂದು ಸಲಿಕ್ಷನಿಗೆ ಬಂದಿದ್ದೆನು. ಅದೂ ಸಿಕ್ಕಲಿಲ್ಲ. ಅಂತೂ ನನ್ನ ಹೀನ ಅದೃಷ್ಟಕ್ಕೆ ದೈವವನ್ನು ದೂರುತ್ತಾ, ಸಮುದ್ರ ಪಡೆದಲ್ಲಿ ಕೂತಿದ್ದ ಹಾಗೆ ನನ್ನ ಪ್ರಾಣಸಖಿಯೂದ ನಿನ್ನನ್ನು ಉದ್ಧರಿಸುವ ಪುಣ್ಯವು ನನಗಾಯಿತು.'

ಕಮಲೆಯು ಮೌನವಾಗಿ ಕೇಳುತ್ತಿದ್ದಳು. ದೇವದತ್ತನ ಮಾತಿನಿಂದಲೂ, ಅವನಿಗುಂಟಾದ ಅಕಲ್ಮಷವಾದ ಸಂತೋಷದಿಂದಲೂ ಅವನಿಗೆ ತನ್ನ ಮೇಲೆ ಮಹತ್ತರವಾದ ಪ್ರೀತಿ ಇದೆ ಎಂಬುವುದು ಅವಳಿಗೆ ನಿವೇದ್ಯವಾಯಿತು. ಕೂಡಲೆ ಅವಳು 'ದೇವದತ್ತಾ! ಸರಿಯಾಗಿ ಯೋಚಿಸಿ ನೋಡಿದಲ್ಲು ಇದರಲ್ಲೇನೋ ದೈವೇಚ್ಛೆ ಇರಬಹುದೆಂದು ನನಗೆ ಬೋಧೆಯಾಗುತ್ತಿ. ನನ್ನ ಸತೀ ಧರ್ಮವನ್ನು ಉದ್ಧರಿಸಿದ ನಿನ್ನ ಎದುರಿನಲ್ಲಿ ನನ್ನ ಮನಸ್ಸನ್ನು ಬಿಚ್ಚಿಡಲು ನಾನೆಂದೂ ಸಂಕೋಚಪಡಲಾರೆನು. ನಾವು ಶಾಲೆಯಲ್ಲಿರುವಾಗ್ಯೆ ನಾನು ಲೋಕವ್ಯವಹಾರವನ್ನು ಸರಿಯಾಗಿ ತಿಳಿಯದ ಬಾಲೆಯಾಗಿದ್ದೆನು. ಆಗ ನಿನ್ನ ಮೇಲೆ ನನಗೆ ಅತ್ಯಂತ ಪ್ರೀತಿ ಇತ್ತಾದರೂ, ಅದು ಕೇವಲ ಸಹೋದರಿಭಾವದ್ದಾಗಿತ್ತು. ಎಳೆ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು, ತಂದೆಗೆ ಒಬ್ಬಳೇ ಮಗಳಾಗಿ ಬಹು ಸುಖವೈಭವದಿಂದ, ಪಾಲಿಸಲ್ಪಟ್ಟವಳಾಗಿದ್ದೆನಾದುದರಿಂದ ನನಗೆ ಐಶ್ವರ್ಯದ ಸುಖಸಂತೋಷಗಳಲ್ಲಿ ಬಹು ಆಶೆ ಇತ್ತು. ನನ್ನ ತಂದೆಯು ಪುನರ್ವಿವಾಹವಾದಂದಿನಿಂದ ನನ್ನ ಜೀವನದಲ್ಲಿ ಒಂದು ಹೊಸ ಅಧ್ಯಾಯವು ತೆರೆಯಲ್ಪಟ್ಟಿತು' (ಕಮಲೆಯ ಕಣ್ಣುಗಳಿಂದ ಎರಡು ಹನಿಗಳು ಬಿದ್ದವು) ದೇವದತ್ತನು ಹಟತ್ತಾಗಿ ತನ್ನ ಆಸನವನ್ನು ಸಮೀಪಕ್ಕೆ ಎಳೆದು ಕಮಲೆಯ ಬಲಕೈಯನ್ನು ಹಿಡಿದುಕೊಂಡನು. ಕಮಲೆಯು ಹೇಳತೊಡಗಿದಳು.

'ತಂದೆಯ ಪುನರ್ಲಗ್ನವಾದ ಕೆಲವು ದಿನಸಗಳಿಂದ ನನ್ನ ಅಂತರಿಕ ವ್ಯಷನಗಳು ಪ್ರಾರಂಭವಾದವು. ಚಿಕ್ಕಂದಿನಿಂದಲೇ ಬಹು ಪ್ರೀತಿಯಿಂದ ಸಲಹಿದ ನನ್ನ ತಂದೆಯು ನನಗೆ ಯಾವ ರೀತಿಯಲ್ಲೂ ವ್ಯಸನ ಉಂಟಾಗದ ಹಾಗೆ ಬಹು ಎಚ್ಚರ ತೆಗೆದುಕೊಳ್ಳುತ್ತಿದ್ದನು. ಆದರೂ ಮಲತಾಯಿಯ ತೊಂದರೆಗಳು ನನ್ನನ್ನು ಕಾಡಿಸದೆ ಬಿಡಲಿಲ್ಲ. ಆಕೆ ಅನೇಕ ತರಹದ ದುರ್ಗುಣಗಳೂ, ದುರ್ನಡತೆಗಳೂ ತಂದೆಯ ಸಿಟ್ಟನ್ನು ಆಗಾಗ್ಯೆ ಎಬ್ಬಿಸುತಿದ್ದವು. ತಂದೆಯಿಂದುಂಟಾದ ಶಿಕ್ಷೆಯ ಸೇಡನ್ನು, ತಂದೆ ಇಲ್ಲದ ಸಮಯದಲ್ಲಿ ಮಲತಾಯಿಯು ನನ್ನ ಮೇಲೆ ತೀರಿಸುತ್ತಿದ್ದಳು. ನಾನು ಪರ್ಷದ ಮುಕ್ಕಾಲು ಪಾಲನ್ನು ಕಾನ್ವೆಂಟಿನಲ್ಲಿಯೂ, ನನ್ನ ಅಜ್ಜಿಯ ಮನೆಯಲ್ಲೂ ಕಳೆಯುತ್ತಿದ್ದೆ. ಮನೆಗೆ ಒಂದಾಗಲೆಲ್ಲಾ ನನ್ನ ಬಾಡಿದ ಮುಖವನ್ನು ಕಂಡು ತಂದೆಯವರಿಗೆ ಅಗಾಧವಾದ ದುಃಖ ಉಂಟಾಗುತ್ತಿತ್ತು. ನನ್ನನ್ನು ಹೆಚ್ಚು ಮುದ್ದಾಡುವುದನ್ನು ಕಂಡರೆ ಚಕ್ಕಪ್ಪನಿಗೆ ಬೇಕಿಯೆಂಗುತ್ತಿದ್ದಳು. ಈ ಮಧ್ಯೆ ತಂದೆಗೆ ಇಬ್ಬರು ಗಂಡುಮಕ್ಕಳಾದರು. ಆ ಅಲಾಗಾಯಿತಿನಿಂದ ಮಲತಾಯಿಯು ನನ್ನ ಸೇವೆಯ ಸಂಪೂರ್ಣ ಯಜಮಾನಿಯಾದಳು. ಅಯ್ಯೋ, ನನ್ನ ತಂದೆಯ ಕಡೆಯ ದಿವಸಗಳೇ! ದೇಶವಿದೇಶಗಳಲ್ಲಾ ಸನ್ಮಾನಿಸಲ್ಪಟ್ಟ ಅವರು ಅವರ ಕಡೆ ದಿನಸಗಳಲ್ಲಿ ಜೈಲು ಪ್ರವಾಸವನ್ನನುಭವಿಸುವಂತಾಯಿತು. ಇತ್ತ ಕಡೆ ನನ್ನ ಮೇಲಿನ ಮಮತೆ; ಅತ್ತ ಕಡೆ ಹೆಂಡತಿಯ ಕಾಟ! ಪಾಪ! ವೃದ್ಧನಾದ ತಂದೆಯು ಈ ತರದ ಸಂಸಾರವೆಂಬ ಬಡಬಾಗ್ನಿಯಲ್ಲಿ ಬೆಂದು ಕುಸಿದು ಕಡೆಗೇನನ್ನೂ ನೋಡಲಾರದೆ ಪರಲೋಕಯಾತ್ರೆಯನ್ನು ಮಾಡಿದನು.' ಕಮಲೆಯ ಕಣ್ಣುಗಳಿಂದ ಅಶ್ರುಧಾರೆಗಳು ಒಂದೇ ಸವನೆ ಬರಲಾರಂಭಿಸಿದವು. ಕರವಸ್ತ್ರದಿಂದ ಅವನ್ನು ವರೆಸಿ, ಪುನಃ ದೇವದತ್ತನ ಕರಗಳನ್ನು ಹಿಡಿದುಕೊಂಡು ಮುಂದುವರಿಸಿದಳು.

[ಸಶೇಷ.]

ಇಂಡಿಯೂದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷ್ಮಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,
52-27 ಬೆಂಗಳೂರು ಸಿಟಿ.

ಳಿ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಪೂರಂಪೌಡರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕಿ.
ಪಂಪ್ತಾ ಕಂಪೆನ್ಸಿ
(52-3) ಗಿರಗಾಂವ, ಮುಂಬಯಿ ೪,

ನೋ ಟೀ ಸು .

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಕಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನವೃತ್ತ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೂದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.
ಹುದಿಕೇರಿ—ಮೆ. ಅಜ್ಜಮಾಡ ಮೂದಪ್ಪನವರು ಮತ್ತು ಮೆ. ಜಿ. ಮೂದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮೂಚಯ್ಯನವರು.
ಸೋಮವಾರಪೇಟೆ—ಮೆ ಕೆ. ಮೊಗಪ್ಪನವರು.
ನಾಪೋಕ್ಲು—ಮೆ. ಬಿಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಷ್ಪಣ್ಣನವರು.

ಸೂಚನೆ.—ಪ್ರಿಂಟುಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 60 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರ[illegible] ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.
52-42

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನನ್ನ ವೈದ್ಯ ಶಾಲೆಯು ಕಾಯಿಲಸ್ಥರನು. ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲು ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರಡಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

23 ಸಿ. ಹೆಚ್. ರಾಮುಣ್ಣಿ ವೈದ್ಯರ್.

ಮೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಸ್ಥೆಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ.	ಪೈ.
ಶೇರ್ ಬಂಡವಾಳ	– 50,000	0	0
ವಸೂಲಾದ ಶೇರ್ ಮೊಬಲಗು	– 45,800	0	0
ಜಮೂಬಂದ ಠೇವಣಾತಿ	– 2,44,140	6	4
ವಸೂಲಾದ ಕ್ಷೇಮನಿಧಿ	– 1,36,525	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	– 16,753	1	11
ತ್ರಿಪ್ಟ್ ಡಿಪಾಜಿಟ್ಟು	– 35,550	2	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಆಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುನಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂಡ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಚೌರೀರ ಎ. ಮಂದಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-10-1938

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮೂಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುತ್ತಾರೆ. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನೆ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

64 ವರ್ಷಗಳಿಂದ್ದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮೆ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮೆ ಮಾಡಿ, ನಿಮ್ಮ ರಕ್ಷಣೆಯಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವನ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾದಲ್ಲೆಲ್ಲಾ ಇರುವೆರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್‌ಪೆಕ್ಟರ್, ಮೈಸೂರು.)

ಮೆ. ಡಿ. ಶೇಷಾದ್ರಿ, ಇನ್ಸ್‌ಪೆಕ್ಟರು, ಶಿವಮೊಗ್ಗಾ.

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್‌ಪೆಕ್ಟರ್, ಮಡಿಕೇರಿ.)

52-51

Printed & Published by P. I. Belliappa, at 'Kodagu' Press Mercara for 'Kodagu' Ltd.